

# ದೇವರು ಒಳ್ಳೆಯ ದೇವರಾಗಿದ್ದಾನೆ!

ಆಶಿಷ್ ರಾಯ್‌ಚೂರ್

**ಉಚಿತವಾದ ಹಂಚಿಕೆಗಾಗಿ ಮಾತ್ರ**
ಮುದ್ರಣ ಮತ್ತು ಹಂಚಿಕೆ: ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್, ಬೆಂಗಳೂರು
ಪ್ರಸ್ತುತ ಪ್ರತಿ: 2025

**ಸಂಪರ್ಕ ಮಾಹಿತಿ**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

ದೂರವಾಣಿ: + 91-80-25452617
ಇಮೇಲ್: **bookrequest@apcwo.org**
ವೆಬ್ಸೈಟ್: **apcwo.org**

ಬೇರೆ ರೀತಿಯಲ್ಲಿ ವಿತರಣೆಯು ಹೊರತು, ಎಲ್ಲಾ ಧರ್ಮಗ್ರಂಥದ ಉಲ್ಲೇಖಗಳನ್ನು ಕನ್ನಡ ಸತ್ಯವೇದವು-ಜೆ.ವಿ-ಬಿ ಎಸ್ ಐ, ಆವೃತ್ತಿಯಿಂದ ತೆಗೆದುಕ್ಕೊಳ್ಳಲಾಗಿದೆ. ಬೈಬಲ್ ಸೊಸೈಟಿ ಆಫ್ ಇಂಡಿಯಾದ(BSI) ಅನುಮತಿಯಿಂದ ಬಳಸಲಾಗಿದೆ.

**ಉಚಿತ ವಿತರಣೆಗಾಗಿ**
ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ಆಲ್ ಪೀಪಲ್ಸ್ ಸಭೆಯೊಟ್ಟಿಗೆ ಪಾಲುದಾರರಾಗಲೂ **apcwo.org/give** ಅಥವಾ ಈ ಪುಸ್ತಕದ ಹಿಂಭಾಗದ ಪುಟಗಳಲ್ಲಿರುವ "ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ" ಎಂಬ ಪುಟವನ್ನು ಹೇಗೆ ಸಹಾಯ ಮಾಡಬಹುದೆಂಬುದನ್ನು ನೋಡಿರಿ. ವಂದನೆಗಳು!

**ಉಚಿತ ಸಂಪನ್ಮೂಲಗಳು ಮತ್ತು ಸಂಬಂಧಿತ ವೆಬ್‌ಸೈಟ್‌ಗಳು**
**ಪ್ರಸಂಗಗಳು:** apcwo.org/sermons | **ಪುಸ್ತಕಗಳು:** apcwo.org/books
**ಚರ್ಚ್ ಆಪ್:** apcwo.org/app | **ಸತ್ಯವೇದ ಕಾಲೇಜು:** apcbiblecollege.org
**ಇ-ಕಲಿಕೆ:** apcbiblecollege.org/elearn | **ಸಲಹಾ ಸೇವೆ:** chrysalislife.org
**ಸಂಗೀತ:** apcmusic.org | **ಸೇವಕರುಗಳ ಅನ್ಯೋನ್ಯತೆ:** pamfi.org
**ಏಪಿಸಿ ಪ್ರಪಂಚ ಸೇವೆಗಳು:** apcworldmissions.org

(Kannada— God is a Good God)

# ದೇವರು ಒಳ್ಳೆಯ ದೇವರಾಗಿದ್ದಾನೆ!

# ಪರಿವಿಡಿ


1. ದೇವರ ಕುರಿತಾದ ನಮ್ಮ ಚಿತ್ರಣ 1

2. ದೇವರ ನಿಜವಾದ ಚಿತ್ರಣ ಬಹಿರಂಗವಾಗಿದೆ 3

3. ದೇವರ ಕುರಿತಾಗಿರುವ ಪ್ರಾಮುಖ್ಯವಾದ ಸತ್ಯಗಳು 6

4. ದೇವರು ಒಳ್ಳೆಯ ದೇವರಾಗಿದ್ದಾನೆ 10

5. ಯೇಸುಕ್ರಿಸ್ತನು–ಅದೃಶ್ಯ ದೇವರ ನಿಜವಾದ ಪ್ರತಿರೂಪ 14

# 1

# ದೇವರ ಕುರಿತಾದ ನಮ್ಮ ಚಿತ್ರಣ

ದೇವರ ಕುರಿತಾಗಿರುವ ನಮ್ಮ ಚಿತ್ರಣವು ವಿವಿಧ ಮೂಲಗಳ ಮೂಲಕ "ಅಭಿವೃದ್ಧಿಗೊಂಡಿದೆ"—ಅವು ಯಾವುವೆಂದರೆ ಇತರರು ದೇವರ ಬಗ್ಗೆ ಏನು ಹೇಳಿದ್ದಾರೆ, ಅವರ ಅನುಭವಗಳು, ಅವಲೋಕನಗಳು, ಓದುವಿಕೆ, ವಿಶ್ಲೇಷಣೆ ಮತ್ತು ಮುಂತಾದವುಗಳಿಂದ ನಾವು ಯಾವ ತೀರ್ಮಾನಕ್ಕೆ ಬರುತ್ತೇವೆ ಎಂಬ ವಿಷಯಗಳಾಗಿವೆ. ಆದರೆ ಇವೆಲ್ಲವೂ ಸರಿಯಾಗಿಲ್ಲದಿರಬಹುದು! ಉದಾಹರಣೆಗೆ, ವಿಮಾ ಕಂಪನಿಗಳು ದುರಂತ ಹವಾಮಾನ ಪರಿಸ್ಥಿತಿಗಳನ್ನು ಉಲ್ಲೇಖಿಸುವ ಹಕ್ಕು ನಿರಾಕರಣೆಗಳನ್ನು ಹೊಂದಿದ್ದು—ಭೂಕಂಪಗಳು, ಚಂಡಮಾರುತಗಳು—"ದೇವರ ಕಾರ್ಯಗಳು" ಎಂಬುದಾಗಿ ತೀರ್ಮಾನಿಸುತ್ತವೆ. ನಾವು ಇಂತಹ ತಾರ್ಕಿಕ-ವಾದಗಳಿಗೆ ಒಳಗಾಗುವಾಗ, ದೇವರ ಬಗ್ಗೆ ತಪ್ಪಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳುತ್ತೇವೆ. ಚಂಡಮಾರುತಗಳು, ಭೂಕಂಪಗಳು ಮತ್ತು ಇತರ ದುರಂತಗಳಿಗೆ ಸಹಜವಾಗಿ ದೇವರೇ ಕಾರಣ ಎಂಬ ಕಲ್ಪನೆಯನ್ನು ನಾವು ಬೆಳೆಸಿಕೊಳ್ಳುತ್ತೇವೆ.

ನಾವು ರಕ್ಷಣೆ ಹೊಂದಿ ಬಹಳ ಸಮಯದಿಂದ ಕ್ರೈಸ್ತರಾಗಿದ್ದರೂ ಸಹ, ದೇವರ ಕುರಿತಾಗಿರುವ ನಮ್ಮ ಚಿತ್ರಣವು ವಿರೂಪಗೊಂಡಿರಬಹುದು, ಅಪರಿಪೂರ್ಣವಾಗಿರಬಹುದು ಅಥವಾ ನಿಖರತೆಯಿಲ್ಲದಿರಬಹುದು. ದೇವರ ನಿಜವಾದ ಚಿತ್ರಣ ನಮ್ಮಲ್ಲಿ ಇಲ್ಲದಿರಬಹುದು. ನಮ್ಮ ಹಿಂದಿನ ಅನುಭವಗಳ ಅಧಾರದ ಮೇರೆಗೆ ದೇವರು ಯಾರು, ಆತನು ಏನು ಮಾಡುತ್ತಾನೆ ಮತ್ತು ಆತನು ಹೇಗೆ ಕೆಲಸ ಮಾಡುತ್ತಾನೆ ಎಂಬ ವಿಷಯದಲ್ಲಿ ನಮ್ಮ ಅನೇಕ ವಕ್ರಗತಿಯ, ತಪ್ಪು ಕಲ್ಪನೆಗಳನ್ನು ಮತ್ತು ತಪ್ಪು ಅಭಿಪ್ರಾಯಗಳನ್ನು ಊಹಿಸಿಕೊಳ್ಳಲು ಬಯಸುತ್ತೇವೆ. ಕೆಲವೊಮ್ಮೆ, ನಾವು ಧಾರ್ಮಿಕ ಸ್ಥಳಗಳಲ್ಲಿ ಕೇಳಿಸಿಕೊಂಡಿರುವ, ಧಾರ್ಮಿಕ ಪುಸ್ತಕಗಳಲ್ಲಿ ಓದಿರುವ ವಿಷಯಗಳು ಕೂಡ ನಮಗೆ ದೇವರನ್ನು ತಪ್ಪಾಗಿ ಪ್ರತಿನಿಧಿಸಬಹುದು ಮತ್ತು ಅದರ ಫಲಿತಾಂಶವಾಗಿ ನಾವು ದೇವರ ಕುರಿತು ತಪ್ಪಾದ ಮತ್ತು ನಿಖರತೆಯಿಲ್ಲದ

ಚಿತ್ರಣವನ್ನು ಹೊಂದಲು ಇವು ಕಾರಣವಾಗಿರಬಹುದು. ನಾವು ಸರಿಯಾದ ಆಲೋಚನೆಯುಳ್ಳವರಾಗಿದ್ದೇವೆಂದು ನಾವು ಯೋಚಿಸಬಹುದು, ಆದರೆ ನಿಜವಾಗಿಯೂ ದೇವರ ಕುರಿತಾದ ನಮ್ಮ ಚಿತ್ರಣವು ತಪ್ಪಾಗಿರಬಹುದು.

# 2

# ದೇವರ ನಿಜವಾದ ಚಿತ್ರಣ ಬಹಿರಂಗವಾಗಿದೆ

**ರೋಮಾಪುರದವರಿಗೆ 1:20-23**

**[20] ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ; ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದ್ದಾರೆ.**

**[21] ಯಾಕಂದರೆ ದೇವರ ವಿಷಯವಾಗಿ ಅವರಿಗೆ ತಿಳುವಳಿಕೆಯಿದ್ದರೂ ಅವರು ಆತನನ್ನು ದೇವರೆಂದು ಘನಪಡಿಸಲಿಲ್ಲ; ಆತನ ಉಪಕಾರಗಳನ್ನು ನೆನಸಿ ಆತನನ್ನು ಸ್ತುತಿಸಲಿಲ್ಲ. ಅವರು ವಿಚಾರ ಮಾಡಿಮಾಡಿ ಫಲ ಕಾಣಲಿಲ್ಲ; ವಿವೇಕವಿಲ್ಲದ ಅವರ ಮನಸ್ಸು ಕತ್ತಲಾಯಿತು.**

**[22] ತಾವು ಜ್ಞಾನಿಗಳೆಂದು ಹೇಳಿಕೊಂಡು ಹುಚ್ಚರಾದರು.**

**[23] ಲಯವಿಲ್ಲದ ದೇವರ ಮಹಿಮೆಯನ್ನು ಬಿಟ್ಟು ಅದಕ್ಕೆ ಬದಲಾಗಿ ಲಯವಾಗುವ ಮನುಷ್ಯ ಪಶು ಪಕ್ಷಿ ಸರ್ಪಾದಿಗಳ ಮೂರ್ತಿಯನ್ನು ಮಾಡಿಕೊಂಡರು.**

ದೇವರ ಸ್ವಭಾವವನ್ನು ಆತನ ಸೃಷ್ಟಿಯ ಮೂಲಕ ನಮಗೆ ಪ್ರಕಟಪಡಿಸಲಾಗಿದೆ. ಆತನ ಅದೃಶ್ಯವಾದ ಗುಣಲಕ್ಷಣಗಳನ್ನು, ಆತನ ನಿತ್ಯವಾದ ಶಕ್ತಿಯನ್ನು ಮತ್ತು ಸರ್ವಸಂಪೂರ್ಣತೆಯನ್ನು ಆತನ ಸೃಷ್ಟಿಯ ಮೂಲಕ ಸ್ಪಷ್ಟವಾಗಿ ನೋಡಬಹುದಾಗಿದೆ ಮತ್ತು ಅರ್ಥಮಾಡಿಕೊಳ್ಳಬಹುದಾಗಿದೆ. ಸೃಷ್ಟಿಯು ತನ್ನ ಸೃಷ್ಟಿಕರ್ತನ ಮಹಿಮೆಯನ್ನು ತಿಳಿಸುತ್ತದೆ (ಕೀರ್ತನೆ 19:1–3). ಆದಾಗ್ಯೂ, ದುಃಖದ ವಿಷಯವೆಂದರೆ ಜನರು "ಸೃಷ್ಟಿಕರ್ತನಿಗೆ" ಬದಲಾಗಿ "ಸೃಷ್ಟಿಯನ್ನು" ಆರಾಧಿಸಲು ಪ್ರಾರಂಭಿಸಿದರು. ಆತನ ಸೃಷ್ಟಿಯನ್ನು ಗಮನಿಸುವುದರ ಮೂಲಕ ನಾವು ಸೃಷ್ಟಿಕರ್ತನ ಬಗ್ಗೆ ಕಲಿಯಬಹುದು, ಆದರೂ ನಾವು ಸೃಷ್ಟಿಯಿಂದಲೇ ದೇವರನ್ನು ಮಾಡದಂತೆ ಜಾಗರೂಕರಾಗಿರಬೇಕು.

**2 ತಿಮೋಥಿ 3:16**

**ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ,**

ಸೃಷ್ಟಿಯ ಹೊರತಾಗಿ, ನಮ್ಮಲ್ಲಿ ದೇವರ ವಾಕ್ಯ—ಸತ್ಯವೇದವಿದೆ—ಅದು ದೇವರ ನಿಜವಾದ ಚಿತ್ರಣವನ್ನು ನಮಗೆ ಪ್ರಕಟಪಡಿಸುತ್ತದೆ ಯಾಕಂದರೆ

ಸತ್ಯವೇದವು ದೇವರು ಬರೆದಿರುವ ಪುಸ್ತಕವಾಗಿದೆ. ಎಲ್ಲಾ ವಾಕ್ಯಗಳನ್ನು ದೇವರ ಪ್ರೇರೇಪಣೆಯಿಂದ ನಮಗೆ ಕೊಡಲಾಗಿದೆ. ದೇವರ ಪ್ರತಿಯೊಂದು ವಾಕ್ಯಗಳು ದೇವರ-ಶ್ವಾಸ ಮತ್ತು ದೇವ-ಪ್ರೇರಿತ ಎಂದು ನಮಗೆ ತಿಳಿದಿದೆ. ದೇವರ ವಾಕ್ಯಗಳನ್ನು ಬರೆದಿರುವ ಬರಹಗಾರರ ಮೇಲೆ ದೇವರ ಹಸ್ತ ಇತ್ತು ಮತ್ತು ಆದ್ದರಿಂದ, ಸತ್ಯವೇದವು ದೇವರು ಯಾರು—ಆತನ ಗುಣಗಳು ಮತ್ತು ಲಕ್ಷಣಗಳು ಏನು ಎಂಬುದರ ಕುರಿತು ಅದುವೇ ತನ್ನ ಪ್ರಕಟಿಸಿಕೊಳ್ಳುತ್ತದೆ.

ಸತ್ಯವೇದ್ಯದಲ್ಲಿ ದೇವರ ಅನೇಕ ಗುಣಗಳು ಮತ್ತು ಲಕ್ಷಣಗಳ ಬಗ್ಗೆ ನಾವು ಓದುತ್ತೇವೆ.

- **ದೇವರು ಸ್ವ-ಅಸ್ತಿತ್ವವುಳ್ಳವನು**. ಆತನು ತನ್ನ ಆಸ್ತಿತ್ವಕ್ಕಾಗಿ ಯಾವುದರ ಮೇಲೂ ಅವಲಂಬನೆಯಾಗುವುದಿಲ್ಲ.
- **ದೇವರು ನಿತ್ಯತ್ವವುಳ್ಳವನಾಗಿದ್ದಾನೆ**. ಸಮಯಕ್ಕಿಂತ ಮುಂಚೆಯೇ, ಆತನು ಇದ್ದಾತನೂ, ಈಗಲೂ ಮತ್ತು ಯಾವಾಗಲೂ ಇರುವಾತನಾಗಿದ್ದಾನೆ.
- **ದೇವರು ಸೃಷ್ಟಿಕರ್ತನಾಗಿದ್ದಾನೆ**. ಆತನು ಎಲ್ಲವನ್ನೂ ಸೃಷ್ಟಿಸಿದ್ದಾನೆ.
- **ದೇವರು ಶಕ್ತಿಯುಳ್ಳಾತನು.** ಆತನು ಸರ್ವಶಕ್ತನಾಗಿದ್ದಾನೆ.
- **ದೇವರು ಜ್ಞಾನವುಳ್ಳಾತನು ಮತ್ತು ಎಲ್ಲವನ್ನೂ ಬಲ್ಲಾತನು.** ಆತನು ಸರ್ವಜ್ಞಾನಿಯಾಗಿದ್ದಾನೆ.
- **ದೇವರು ಎಲ್ಲಾ ಕಡೆ ಇರುವಾತನು**. ಆತನು ಸರ್ವವ್ಯಾಪಿಯಾಗಿದ್ದಾನೆ. ಅವನ ಉಪಸ್ಥಿತಿಯು ಎಲ್ಲಾ ಸಮಯ ಮತ್ತು ಸ್ಥಳವನ್ನು ವ್ಯಾಪಿಸುತ್ತದೆ.
- **ದೇವರು ವೈಯಕ್ತಿಕವಾಗಿ ಆತ್ಮಸ್ವರೂಪನಾಗಿದ್ದಾನೆ**. ಆತನು ಆತ್ಮಸ್ವರೂಪನು, ಆದರೆ ಆತನು ವ್ಯಕ್ತಿಗತನು. ಆತನು ಭಾವನೆಗಳನ್ನು ಮತ್ತು ಅನುಭವಗಳನ್ನು ಹೊಂದಿದ್ದಾನೆ.
- **ದೇವರು ಅನಂತನು**. ಆತನು ಎಲ್ಲಾ ಅಳತೆಗೂ ಮೀರಿದವನು.
- **ದೇವರು ಅಚಲನು**. ಆತನು ಬದಲಾಗದ ದೇವರು. ನಮಗೆ ವಯಸ್ಸಾಗುತ್ತದೆ ಮತ್ತು ಬದಲಾಗಬಹುದಾದ ಕೆಲವು ವ್ಯಕ್ತಿತ್ವ ಗುಣಲಕ್ಷಣಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ್ತೇವೆ. ಆದರೆ ದೇವರು ಒಂದೇ

ರೀತಿಯಾಗಿ ಇರುತ್ತಾನೆ.ಆತನು ಪ್ರೌಢನಾಗುವುದರ ಅಗತ್ಯವಿಲ್ಲ.

- **ದೇವರು ಸಾರ್ವಭೌಮನಾಗಿದ್ದಾನೆ**. ಆತನು ನನ್ನೊಂದಿಗೆ ಮತ್ತು ನಿಮ್ಮೊಂದಿಗೆ ಸಮಾಲೋಚಿಸುವ ಅಗತ್ಯವಿಲ್ಲ. ಆತನಿಗೆ ಮೆಚ್ಚಿಕೆಯಾದುದನ್ನೇ ಆತನು ಮಾಡುತ್ತಾನೆ.
- **ದೇವರು ಪರಿಶುದ್ಧನು.**
- **ದೇವರು ನೀತಿವಂತನು**.
- **ದೇವರು ನ್ಯಾಯವುಳ್ಳವನು.**
- **ದೇವರು ಸತ್ಯವುಳ್ಳ ದೇವರಾಗಿದ್ದಾನೆ.**
- **ದೇವರು ಪ್ರೀತಿಯುಳ್ಳ ದೇವರಾಗಿದ್ದಾನೆ.**
- **ದೇವರು ಒಳ್ಳೆತನದ ದೇವರಾಗಿದ್ದಾನೆ**. ಆತನು ಒಳ್ಳೆಯ ದೇವರಾಗಿದ್ದಾನೆ, ಮತ್ತು ಈ ಗುಣಲಕ್ಷಣವನ್ನು ನಾವು ಮುಂದಿನ ಅಧ್ಯಾಯಗಳಲ್ಲಿ ಅಧ್ಯಯನ ಮಾಡೋಣ.

# 3
# ದೇವರ ಕುರಿತಾಗಿರುವ ಪ್ರಾಮುಖ್ಯವಾದ ಸತ್ಯಗಳು

ದೇವರ ಕುರಿತಾದ ಕೆಲವು ಪ್ರಾಮುಖ್ಯವಾದ ಸತ್ಯಗಳು ಹೀಗಿವೆ.

## ದೇವರ ಚಿತ್ತವು ಯಾವಾಗಲೂ–ಆತನು ಯಾರು-ಎಂಬ ಆತನ ಸ್ವಭಾವದೊಂದಿಗೆ ಸಾಮರಸ್ಯವುಳ್ಳದ್ದಾಗಿರುತ್ತದೆ

ಒಂದುವೇಳೆ ನಾವು ದೇವರು ಯಾರೆಂದು ತಿಳಿದುಕೊಂಡರೆ, ಆತನ ಚಿತ್ತ ಏನೆಂದು ತಿಳಿದುಕೊಳ್ಳುತ್ತೇವೆ. ನಮ್ಮ ವಿಷಯವಾಗಿರುವ ಆತನ ಚಿತ್ತವು, ಆತನ ಸ್ವಭಾವಕ್ಕೆ ಅಥವಾ ಆತನು ಯಾರಾಗಿದ್ದಾನೆ ಎಂಬದಕ್ಕೆ ಎಂದಿಗೂ ವಿರುದ್ಧವಾಗಿರುವುದಿಲ್ಲ. ಒಂದುವೇಳೆ ದೇವರ ಚಿತ್ತವೇನೆಂದು ನಮಗೆ ಗೊತ್ತಿಲ್ಲ ಎಂದು ನಾವು ಕೆಲವೊಮ್ಮೆ ಹೇಳಿದರೆ, ನಮಗೆ ಆತನು ಯಾರು ಎಂಬದೇ ಗೊತ್ತಿಲ್ಲ ಎಂಬದು ಅದರ ಅರ್ಥವಾಗಿದೆ. ಉದಾಹರಣೆಗೆ, ಪಾಪಗಳನ್ನು ಕ್ಷಮಿಸುವುದು ದೇವರ ಚಿತ್ತವಾಗಿದೆಯೇ ಎಂದು ತಿಳಿದುಕೊಳ್ಳಲು ನಾವು ಉಪವಾಸವಿದ್ದು ಪ್ರಾರ್ಥನೆ ಮಾಡುವದಿಲ್ಲ! ಕ್ಷಮಿಸುವುದು ಆತನ ಸ್ವಭಾವವಾಗಿದೆ ಮತ್ತು ದೇವರು ಪಾಪವನ್ನು ಕ್ಷಮಿಸುತ್ತಾನೆ ಎಂದು ತಿಳಿದು ನಾವು ದೇವರ ಹತ್ತಿರಕ್ಕೆ ಬರುತ್ತೇವೆ. ಅನಾರೋಗ್ಯದಲ್ಲಿ ಇರುವ ವ್ಯಕ್ತಿಗೂ ಇದು ಅನ್ವಯಿಸುತ್ತದೆ. ಅನಾರೋಗ್ಯದಲ್ಲಿರುವ ವ್ಯಕ್ತಿಯನ್ನು ಗುಣಪಡಿಸುವುದು ಸಹ ದೇವರ ಚಿತ್ತವಾಗಿದೆ ಏಕೆಂದರೆ ಆತನು ವೈದ್ಯನಾಗಿದ್ದಾನೆ ಮತ್ತು ಆತನ ಚಿತ್ತವು ಯಾವಾಗಲೂ ಆತನ ಸ್ವಭಾವಕ್ಕೆ ಹೊಂದಿಕೆಯಾಗುತ್ತದೆ; ಆತನು ಎಂದಿಗೂ ತನ್ನ ಸ್ವಭಾವಕ್ಕೆ ವಿರುದ್ಧವಾಗಿ ನಡೆದುಕೊಳ್ಳುವದಿಲ್ಲ. ಆದ್ದರಿಂದ, ಅನಾರೋಗ್ಯದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯನ್ನು ಗುಣಪಡಿಸುವುದು ಆತನ ಚಿತ್ತವಾಗಿದೆ. *"ನಾನು ಯೆಹೋವ ರಾಫಾ"* (ಆರೋಗ್ಯದಾಯಕನು) ಎಂದು ಹೇಳುವ ಮೂಲಕ ಗುಣಪಡಿಸುವ ದೇವರಾಗಿ ತನ್ನ ಸ್ವಭಾವವನ್ನು ಪ್ರಕಟಪಡಿಸಿದ್ದಾನೆ.

## ದೇವರು ತನ್ನ ಸ್ವಭಾವ ಮತ್ತು ಗುಣಲಕ್ಷಣದೊಂದಿಗೆ ಸಾಮರಸ್ಯವುಳ್ಳವನಾಗಿ ಎಲ್ಲವನ್ನು ಮಾಡುತ್ತಾನೆ

ಆದ್ದರಿಂದ, ಒಂದು ವೇಳೆ ಆತನು ಯಾರಾಗಿದ್ದಾನೆಂದು ನಾವು ತಿಳಿದುಕೊಂಡರೆ, ಆತನು ಏನು ಮಾಡುತ್ತಾನೆಂಬದನ್ನೂ ತಿಳಿದುಕೊಳ್ಳಬಹುದು. ಮದುವೆಯಾದವರು ಇದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ನನ್ನ ಹೆಂಡತಿ ಏಮಿ, ನಾನು ಏನು ಯೋಚಿಸುತ್ತಿದ್ದೇನೆ, ನಾನು ಹೇಗೆ ವರ್ತಿಸುತ್ತೇನೆ ಮತ್ತು ನಿರ್ದಿಷ್ಟ ಸನ್ನಿವೇಶದಲ್ಲಿ ನಾನು ಏನು ಮಾಡುತ್ತೇನೆ ಎಂದು ಮುಂಚಿತವಾಗಿಯೇ ಹೇಳುತ್ತಾಳೆ ಏಕೆಂದರೆ ಅವಳು ನನ್ನನ್ನು ಚೆನ್ನಾಗಿ ತಿಳಿದುಕೊಂಡಿದ್ದಾಳೆ. ಕಾಲಕ್ರಮೇಣ, ಅವಳು ನನ್ನ ಸ್ವಭಾವ ಮತ್ತು ನಡವಳಿಕೆಯನ್ನು ಅರ್ಥಮಾಡಿಕೊಂಡಿದ್ದಾಳೆ. ಅದರಂತೆಯೇ, ನಾವು ದೇವರನ್ನು ತಿಳಿದಾಗ, ಆತನು ಏನು ಮಾಡುತ್ತಾನೆಂದು ತಿಳಿದುಕೊಳ್ಳಬಹುದು. ಆತನು ಮಾಡುವ ಕೆಲಸವು ಆತನ ಸ್ವಭಾವ ಮತ್ತು ಗುಣಲಕ್ಷಣಗಳೊಂದಿಗೆ ಸಾಮರಸ್ಯವುಳ್ಳದ್ದಾಗಿರುತ್ತದೆ.

ನಾವು ಮೊದಲೇ ಹೇಳಿದಂತೆ, ಸತ್ಯವೇದವು ನಮಗೆ ದೇವರನ್ನು ಪ್ರಕಟಪಡಿಸುತ್ತದೆ. ಆದುದರಿಂದ, ದೇವರು ಯಾರು ಆತನ ಸ್ವಭಾವ ಮತ್ತು ಆತನ ಗುಣಲಕ್ಷಣ ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಸತ್ಯವೇದವನ್ನು ಓದುವುದು ನಮಗೆ ಪ್ರಯೋಜನಕಾರಿಯಾಗಿದೆ.

## ದೇವರು ತನ್ನ ಸ್ವಭಾವ ಮತ್ತು ಗುಣಲಕ್ಷಣದ ವಿರೋದವಾಗಿ ಅಥವಾ ವಿರುದ್ಧವಾದ ಇರುವ ಯಾವ ಹೇಳಿಕೆಯನ್ನು ಕೊಡುವದಿಲ್ಲ ಅಥವಾ ಯಾವ ಕಾರ್ಯವನ್ನೂ ಮಾಡುವುದಿಲ್ಲ

"ನಾನು ಸತ್ಯವುಳ್ಳದೇವರಾಗಿದ್ದೇನೆ, ಆದರೆ ಕೆಲವೊಮ್ಮೆ ಸುಳ್ಳು ಹೇಳುತ್ತೇನೆ" ಎಂದು ದೇವರು ಹೇಳುವುದಿಲ್ಲ. ಅಲ್ಲದೆ, "ನಾನು ಒಳ್ಳೆಯ ದೇವರಾಗಿದ್ದೇನೆ ಆದರೆ ಕೆಲವೊಮ್ಮೆ ಕೆಟ್ಟದ್ದನ್ನು ಮಾಡುತ್ತೇನೆ" ಎಂದು ಆತನು ಎಂದಿಗೂ ಹೇಳಲು ಸಾಧ್ಯವಿಲ್ಲ. ಆದ್ದರಿಂದ, ಆತನು ಎಂದಿಗೂ ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಏನನ್ನೂ ಮಾಡುವುದಿಲ್ಲ. ನಾವು ಕೇಳಿಸಿಕೊಳ್ಳುತ್ತಾ ಇರುವದು ದೇವರಿಂದ, ಸೈತಾನನಿಂದ ಅಥವಾ ನಮ್ಮಿಂದಲೇ ಬರುತ್ತಿದೆಯಾ ಎಂಬದನ್ನು ತಿಳಿದುಕೊಳ್ಳಲು ಇದರಿಂದ ಸುಲಭವಾಗುತ್ತದೆ. ಇದನ್ನು ನಿರ್ಧರಿಸುವುದು ತುಂಬಾ ಸರಳವಾಗಿದೆ-ನಾವು ಕೇಳುತ್ತಿರುವುದು ಆತನ ಸ್ವಭಾವ ಮತ್ತು

ಗುಣಲಕ್ಷಣಗಳಿಗೆ ಅನುಗುಣವಾಗಿದ್ದರೆ, ಅದು ದೇವರಿಂದ ಬಂದದ್ದಾಗಿದೆ. ಒಂದುವೇಳೆ ಅದು ಆತನ ಸ್ವಭಾವಕ್ಕೆ ವಿರುದ್ಧವಾಗಿದ್ದರೆ, ಅದು ದೇವರಿಂದ ಬಂದದ್ದಲ್ಲ. ಆದ್ದರಿಂದ, ಆತನು ಯಾರೆಂದು ನಮಗೆ ಗೊತ್ತಿದ್ದರೆ, ಆತನು ಏನು ಹೇಳುತ್ತಾನೆ ಮತ್ತು ಏನು ಮಾಡುತ್ತಾನೆ ಎಂಬುದು ನಮಗೆ ಗೊತ್ತಾಗುತ್ತದೆ.

## ದೇವರ ಶಕ್ತಿಯು ಸಂಪೂರ್ಣವಾಗಿ ಅಪರಿಮಿತವಾದದ್ದು ಮತ್ತು ದೇವರು ಮಾಡದೆ ಇರುವ ನಿರ್ದಿಷ್ಟವಾದ ಕಾರ್ಯಗಳು ಇನ್ನೂ ಇವೆ

ದೇವರು ತಾನು ಮಾಡದೇ ಇರುವ ಕೆಲವೊಂದು ಕಾರ್ಯಗಳನ್ನು ಘೋಷಿಸಿದ್ದಾನೆ. ಉದಾಹರಣೆಗೆ,

- ದೇವರು ತನ್ನ ಸ್ವಭಾವಕ್ಕೆ ವಿರುದ್ಧವಾಗಿ ಏನೂ ಮಾಡುವದಿಲ್ಲ (2 ತಿಮೋಥಿ 2:13).
- ದೇವರು ಸುಳ್ಳಾಡುವುದಿಲ್ಲ (ತೀತನು 1:2).
- ದೇವರು ಎಂದಿಗೂ ಪಾಪವನ್ನು ಮಾಡುವುದಿಲ್ಲ (ಯಾಕೋಬನು 1:13).

ಆತನು ಇವುಗಳನ್ನು ಎಂದಿಗೂ ಮಾಡಲು ಸಾಧ್ಯವಿಲ್ಲ ಯಾಕೆಂದರೆ ಇವುಗಳು ಆತನ ಸ್ವಭಾವಕ್ಕೆ ವಿರುದ್ಧವಾಗಿವೆ. ಆತನು ಎಂದಿಗೂ ಅಪನಂಬಿಗಸ್ತನಾಗುವದಿಲ್ಲ, ಎಂದಿಗೂ ಸುಳ್ಳು ಹೇಳುವುದಿಲ್ಲ ಅಥವಾ ಪ್ರೀತಿಸುವುದನ್ನು ನಿಲ್ಲಿಸುವುದಿಲ್ಲ.

## ದೇವರು ತನ್ನ ಜನರಿಗೆ ಕೊಟ್ಟಿರುವಂತ ಮುಕ್ತ ನೈತಿಕ ಇಚ್ಛೆಯನ್ನು (ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು) ಎಂದಿಗೂ ಅತಿಕ್ರಮಿಸುವುದಿಲ್ಲ

ತನ್ನ ಸಾರ್ವಭೌಮತ್ವದಲ್ಲಿ, ದೇವರು ನಮ್ಮ ಸ್ವತಂತ್ರ ನೈತಿಕ ಇಚ್ಛೆಯನ್ನು—ಒಳ್ಳೆಯದು ಅಥವಾ ಕೆಟ್ಟದ್ದನ್ನು ಆಯ್ಕೆ ಮಾಡುವ ನಮ್ಮ ಸ್ವಾತಂತ್ರ್ಯವನ್ನು ಅತಿಕ್ರಮಿಸುವುದಿಲ್ಲ ಎಂಬ ಆಯ್ಕೆಯನ್ನು ಮಾಡಿಕೊಂಡಿದ್ದಾನೆ. ಆದುದರಿಂದಲೇ ಆತನು ಆದಾಮ ಹವ್ವಳು ಪಾಪಮಾಡುವಾಗ ಅವರನ್ನು ತಡೆಯಲಿಲ್ಲ. ದೇವರು ನಮ್ಮ ಸ್ವತಂತ್ರ ನೈತಿಕ ಇಚ್ಛೆಯನ್ನು ಅತಿಕ್ರಮಿಸಿದರೆ, ನಾವು ಮನುಷ್ಯರಾಗಿರುವುದಿಲ್ಲ ಬದಲಾಗಿ ರೋಬೋಟ್ ಗಳಾಗುತ್ತೇವೆ. ಮತ್ತು ದೇವರು ರೋಬೋಟ್‌ಗಳನ್ನು ಸೃಷ್ಟಿಸಿಲ್ಲ. ಆತನು ಇಚ್ಛಾಸ್ವಾತಂತ್ರ್ಯವನ್ನು ನೀಡಿದ ಜನರನ್ನು ತನ್ನ ಸ್ವಂತ ರೂಪದಲ್ಲಿ ಸೃಷ್ಟಿಸಿದನು. ನಮ್ಮ ಸ್ವತಂತ್ರ (ಸ್ವ)

ಇಚ್ಛೆಯನ್ನ–ಆಯ್ಕೆ ಮಾಡುವ ನಮ್ಮ ಸ್ವಾತಂತ್ರ್ಯವನ್ನು ಆತನು **ಎಂದಿಗೂ** ಅತಿಕ್ರಮಿಸುವುದಿಲ್ಲ. ಆತನು ಪ್ರಭಾವ ಬೀರುತ್ತಾನೆ, ಸರಿಪಡಿಸುತ್ತಾನೆ, ಕಲಿಸುತ್ತಾನೆ, ಮಾರ್ಗದರ್ಶನ ಮಾಡುತ್ತಾನೆ, ನಮ್ಮಲ್ಲಿ ಕಾರ್ಯ ಮಾಡುತ್ತಾನೆ, ತನ್ನ ವಾಕ್ಯವನ್ನು ನಮಗೆ ನೀಡಿ ಪವಿತ್ರಾತ್ಮನಿಂದ ನಮ್ಮನ್ನು ಬಲಪಡಿಸುತ್ತಾನೆ ಆದರೆ ನಮಗಾಗಿ ಎಂದಿಗೂ ಆಯ್ಕೆ ಮಾಡುವುದಿಲ್ಲ. ಈ ಕಾರಣದಿಂದಲೇ ನರಕಕ್ಕೆ ಹೋಗಲು ಜನರಿಗೆ ಅನುಮತಿಸುತ್ತಾನೆ. ಎಲ್ಲರೂ ರಕ್ಷಣೆ ಹೊಂದಬೇಕೆಂಬದೇ ದೇವರ ಚಿತ್ತವಾಗಿದೆ, ಆದರೆ ಜನರು ಇನ್ನೂ ನರಕಕ್ಕೆ ಹೋಗುವ ಆಯ್ಕೆಯನ್ನು ಮಾಡಿಕೊಳ್ಳುತ್ತಾ ಇದ್ದಾರೆ. ದೇವರು ಕೆಲವರಿಗೆ ನರಕಕ್ಕೆ ಹೋಗಿರಿ ಮತ್ತು ಕೆಲವರಿಗೆ ಸ್ವರ್ಗಕ್ಕೆ ಹೋಗಿರಿ ಎಂದು ಹೇಳಿಯೇ ಇಲ್ಲ. ಅದು ಪಕ್ಷಪಾತವಾಗುತ್ತದೆ. ಜನರು ಆಯ್ಕೆಗಳನ್ನು ಮಾಡುತ್ತಾರೆ. ಆದ್ದರಿಂದ, ದೇವರು ಎಲ್ಲವನ್ನೂ ನಿಯಂತ್ರಣದಲ್ಲಿಟ್ಟುಕೊಂಡಿದ್ದಾನೆ ಎಂದು ನಾವು ಹೇಳಿದಾಗ, ಸಾಮಾನ್ಯ ಪರಿಭಾಷೆಯಲ್ಲಿ, ಅದು ಸರಿಯಾಗಿದೆ. ಆದರೆ ನಿರ್ದಿಷ್ಟವಾಗಿ, ಭೂಮಿಯ ಮೇಲೆ ನಮ್ಮ ಸ್ವತಂತ್ರ ಇಚ್ಛೆಯನ್ನಾಗಲಿ ಅಥವಾ ನಾವು ಮಾಡುವ ಆಯ್ಕೆಗಳನ್ನಾಗಲಿ ದೇವರು ಎಂದಿಗೂ ನಿಯಂತ್ರಿಸುವುದಿಲ್ಲ. ಒಂದುವೇಳೆ ನಾವು ಮೂರ್ಖತನದ ಅಥವಾ ನಾಶನದ ಕಾರ್ಯಗಳನ್ನು ಮಾಡಲು ನಿರ್ಧರಿಸಿದರೆ, ಅದು ನಮ್ಮ ಆಯ್ಕೆಯಾಗಿರುತ್ತದೆ.

# 4
# ದೇವರು ಒಳ್ಳೆಯ ದೇವರಾಗಿದ್ದಾನೆ

ಸತ್ಯವೇದ್ಯದಲ್ಲಿ ದೇವರ ಕುರಿತು ನಮಗೆ ಪ್ರಕಟಿಸಲಾಗಿರುವ ಅನೇಕ ವಿಷಯಗಳಲ್ಲಿ, ತಪ್ಪಿಲ್ಲದಂಥ ಒಂದು ಸತ್ಯ ಮತ್ತೆಮತ್ತೆ ಅದರಲ್ಲಿ ಪುನರಾವರ್ತನೆಯಾಗಿದೆ ಅದೇನೆಂದರೆ—ದೇವರು ಒಳ್ಳೆಯ ದೇವರಾಗಿದ್ದಾನೆ.

**ಕೀರ್ತನೆಗಳು 34:8**

**ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ; ಆತನನ್ನು ಆಶ್ರಯಯಿಸಿಕೊಂಡವರು ಎಷ್ಟೋ ಧನ್ಯರು.**

**ಕೀರ್ತನೆಗಳು 100:5**

**ಯೆಹೋವನು ಒಳ್ಳೆಯವನು; ಆತನ ಕೃಪೆಯು ಯುಗಯುಗಕ್ಕೂ, ಆತನ ಸತ್ಯತೆಯು ತಲತಲಾಂತರಕ್ಕೂ ಇರುವವು.**

**ಕೀರ್ತನೆಗಳು 107: 1,8**

**1ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ; ಆತನು ಒಳ್ಳೆಯವನು.**

**8ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿ ನಡಿಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ.**

ಎಲ್ಲವೂ ಅದ್ಭುತವಾಗಿರುವಾಗ ನಾವು ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿ ಆತನ ಒಳ್ಳೇತನಕ್ಕಾಗಿ ಆತನನ್ನು ಸ್ತುತಿಸುತ್ತೇವೆ. ಆದರೆ ಯಾವಾಗ ವಿಷಯಗಳು “ಅದ್ಭುತವಾಗಿರುವುದಿಲ್ಲವೋ” ಆಗ ದೇವರು ಒಳ್ಳೆಯವನಾಗಿರುವುದನ್ನು ನಿಲ್ಲಿಸಿದ್ದಾನೆ ಎಂಬ ಆಲೋಚನೆಯನ್ನು ನಾವು ಮಾಡುತ್ತೇವೆ. ದಿನದ ಪ್ರಾರಂಭದಲ್ಲಿ ನಾವು ಎರಡು ತಾಸುಗಳು ಪ್ರಾರ್ಥನೆ ಮಾಡುವಾಗ, ಈ ದಿನವೆಲ್ಲಾ ದೇವರು ನಮಗೆ ಒಳ್ಳೆಯವನಾಗಿರುತ್ತಾನೆ ಎಂದು ಯೋಚಿಸಲು ನಾವು ಪ್ರಾರಂಭಿಸುತ್ತೇವೆ. ಆದರೆ ಮಾರಣೆಯ ದಿನ ನಾವು ಕೆಲವು ನಿಮಿಷಗಳು ಮಾತ್ರವೇ ಪ್ರಾರ್ಥನೆ ಮಾಡುವಾಗ, ಆತನು ಇಂದು ನಮಗೆ ಒಳ್ಳೆಯವನಾಗಿರುವದಿಲ್ಲವೇನೋ ಎಂದು ಯೋಚಿಸಲು ಪ್ರಾರಂಭಿಸುತ್ತೇವೆ. ದೇವರ ಒಳ್ಳೆಯತನವು ನಾವು ಎಷ್ಟು ಹೊತ್ತು ಪ್ರಾರ್ಥನೆ

ಮಾಡುತ್ತೇವೆಂಬುದರ ಮೇಲೆ ಅವಲಂಬನೆ ಆಗಿದೆ ಎಂದು ಒಂದಲ್ಲ ಒಂದು ಹಂತದಲ್ಲಿ ಯೋಚಿಸುವುದರಲ್ಲಿ ನಾವೆಲ್ಲರು ಅಪರಾಧದ ಭಾವನೆಗೆ ಒಳಗಾಗುತ್ತೇವೆ. ಆದರೆ ದೇವರು ಯಾರಾಗಿದ್ದಾನೋ ಆ ಕಾರಣದಿಂದಲೇ ಒಳ್ಳೆಯವನಾಗಿದ್ದಾನೆ ಮತ್ತು ನಾವು ಪ್ರಾರ್ಥನೆ ಮಾಡಿದರೂ ಮಾಡದೆ ಇದ್ದರೂ ನಮಗೆ ಒಳ್ಳೆಯವನಾಗಿಯೇ ಇರುತ್ತಾನೆ.

ನಮ್ಮಲ್ಲಿ ಕೆಲವರು ಕ್ರೈಸ್ತರಿಗೆ ಮಾತ್ರ ದೇವರು ಒಳ್ಳೆಯವನಾಗಿರುತ್ತಾನೆಂದು ಆಲೋಚಿಸುತ್ತೇವೆ ಆದರೆ ಸತ್ಯವೇದವು ಹೇಳುವದೇನೆಂದರೆ,

**ಕೀರ್ತನೆಗಳು 145:8,9**

**8 ಯೆಹೋವನು ದಯೆಯೂ ಕನಿಕರವೂ ಉಳ್ಳವನು; ದೀರ್ಘಶಾಂತನೂ ಪ್ರೀತಿಪೂರ್ಣನು ಆಗಿದ್ದಾನೆ.**

**9 ಯೆಹೋವನು ಸರ್ವೋಪಕಾರಿಯೂ ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತನೂ ಆಗಿದ್ದಾನೆ.**

ದೇವರು ಎಲ್ಲರಿಗೂ ಒಳ್ಳೆಯವನಾಗಿದ್ದಾನೆ. ನಮ್ಮನ್ನು ಹಿಂಸಿಸುವವರಿಗೂ ಆತನು ಒಳ್ಳೆಯವನಾಗಿದ್ದಾನೆ. ದೇವರು ಸಭೆಗೆ ಹೋಗುವವರಿಗೆ ಮಾತ್ರವಲ್ಲದೆ, ಪಾಪಿಗಳಿಗೂ ಒಳ್ಳೆಯವನಾಗಿದ್ದಾನೆ!

**ಮತ್ತಾಯ 5:45**

**ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ.**

ಆದ್ದರಿಂದ, ಅವ್ಯವಸ್ಥೆಯಲ್ಲಿ ಇರುವಂತ ಪಾಪಿಗಳಿಗಾಗಿ ನಾವು ಪ್ರಾರ್ಥಿಸಬಹುದು ಮತ್ತು ಅವರ ಮೇಲೆ ದೇವರು ತನ್ನ ಒಳ್ಳೆಯತನವನ್ನು ಸುರಿಸುವಂತೆ ಆತನನ್ನು ಕೇಳಿಕೊಳ್ಳಬಹುದು. ದೇವರು ಎಲ್ಲರಿಗೂ ಒಳ್ಳೆಯವನಾಗಿದ್ದಾನೆ. ದೇವರು ಪಾಪಿಗೆ ಒಳ್ಳೆಯವನಾಗಿರಬೇಕೆಂದರೆ ಅವನು ತನ್ನನ್ನು ಶುದ್ಧೀಕರಿಸಿಕೊಂಡು ತನ್ನ ಕಾರ್ಯಗಳನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳುವ ಅವಶ್ಯಕತೆ ಇಲ್ಲ. *“ಯೆಹೋವನು ಸರ್ವೋಪಕಾರಿಯೂ ತಾನು ನಿರ್ಮಿಸಿದವುಗಳನ್ನೆಲ್ಲಾ ಕರುಣಿಸುವಾತನೂ ಆಗಿದ್ದಾನೆ”*(ಕೀರ್ತನೆಗಳು 145:9). ಪಾಪಿಯು ತಾನು ಇದ್ದಂತ ಪಾಪದ, ಅವ್ಯವಸ್ಥೆಯ, ಸ್ಥಿತಿಯಲ್ಲಿಯೇ ದೇವರ ಬಳಿಗೆ ಬರಲಿ—ಮತ್ತು ದೇವರ ಒಳ್ಳೆಯತನವೂ ಅವರನ್ನು ಪಶ್ಚಾತ್ತಾಪದ

ಕಡೆಗೆ ನಡೆಸುತ್ತದೆ (ರೋಮಾಪುರದವರಿಗೆ 2:4).

ಮತ್ತು ದೇವರು ಒಳ್ಳೆಯ ದೇವರಾಗಿರುವ ಕಾರಣದಿಂದ, ಆತನು ನಮಗೋಸ್ಕರವಾಗಿ ಒಳ್ಳೆಯದನ್ನೇ ಬಯಸುವವನಾಗಿದ್ದಾನೆ. "ನಾನು ಒಳ್ಳೆಯ ದೇವರಾಗಿದ್ದೇನೆ, ಆದರೆ ನಿಮಗೆ ಕೆಟ್ಟದನ್ನು ಬಯಸುತ್ತೇನೆ" ಎಂದು ದೇವರು ತನ್ನ ವಿರುದ್ಧವಾಗಿ ಎಂದು ಹೇಳುವುದಿಲ್ಲ. ದೇವರು ಹೇಳುವುದನ್ನೇ ಮಾಡುತ್ತಾನೆ ಮತ್ತು ಆತನ ಚಿತ್ತವೂ ಯಾವಾಗಲೂ ಒಳ್ಳೆಯದಾಗಿರುತ್ತದೆ.

## ದೇವರು ಉದಾರವಾಗಿ ಕೊಡುವವನಾಗಿದ್ದಾನೆ ಯಾಕೆಂದರೆ ದೇವರು ಒಳ್ಳೆಯ ದೇವರಾಗಿದ್ದಾನೆ

**ಮತ್ತಾಯ 7:7-11**

**7ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು;**

**8ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು.**

**9ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ?**

**10,11ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

ಒಂದುವೇಳೆ ಭೂಲೋಕದಲ್ಲಿರುವ ತಂದೆಗಳು ತಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಹುದಾದರೆ, ದೇವರ ತಂದೆಯ-ಹೃದಯವನ್ನು ಕಡೆಗಾಣಿಸಬೇಡಿ. ದೇವರು ಕಟ್ಟಕಡೆಯ ತಂದೆಯಾಗಿದ್ದಾನೆ. ಮತ್ತು ಒಂದುವೇಳೆ ನಾವು ದುಷ್ಟರಾದರೂ ನಮ್ಮ ಮಕ್ಕಳನ್ನು ಪ್ರೀತಿ ಮತ್ತು ಕಾಳಜಿಯೊಂದಿಗೆ ಹಾರೈಸುವಾಗ, ಆನಂತವಾಗಿ ಮಹೋನ್ನತನಾಗಿರುವ ದೇವರು ತನ್ನ ಮಕ್ಕಳಿಗೆ ಒಳ್ಳೆಯದನ್ನೇ ಕೊಡುತ್ತಾನೆಂದು ನಾನು ನಿಮಗೆ ಖಚಿತವಾಗಿ ಹೇಳುತ್ತೇನೆ.

**ಯಾಕೋಬನು 1:17**

**ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ.**

**ಕೀರ್ತನೆಗಳು 84:11**
**ಯೆಹೋವದೇವರು ಸೂರ್ಯನೂ ಗುರಾಣಿಯೂ ಆಗಿದ್ದಾನಲ್ಲಾ.**
**ಯೆಹೋವನು ಕೃಪೆಯನ್ನೂ ಘನವನ್ನೂ ಅನುಗ್ರಹಿಸುವನು;**
**ಆತನು ಸದ್ಭಕ್ತರಿಗೆ ಯಾವ ಶುಭವನ್ನು ದಯಪಾಲಿಸದೆ ಇದ್ದಾನು?**

ದೇವರು ಒಳ್ಳೆಯ ಮತ್ತು ಪರಿಪೂರ್ಣ ವರಗಳನ್ನು ಕೊಡುವವನಾಗಿದ್ದಾನೆ. ಆತನು ನಮ್ಮಿಂದ ಯಾವುದೇ ಒಳ್ಳೆಯ ವಿಷಯಗಳನ್ನು ಹಿಡಿದಿಟ್ಟುಕೊಳ್ಳುವುದಿಲ್ಲ.

# 5

# ಯೇಸುಕ್ರಿಸ್ತನು–ಅದೃಶ್ಯ ದೇವರ ನಿಜವಾದ ಪ್ರತಿರೂಪ

**ಕೊಲೊಸ್ಸೆಯವರಿಗೆ 1:15**

**ಆತನು ಅದೃಶ್ಯನಾದ ದೇವರ ಪ್ರತಿರೂಪನೂ ಆಗಿದ್ದಾನೆ...**

**2 ಕೊರಿಂಥದವರಿಗೆ 4:4**

**...ಕ್ರಿಸ್ತನು, ದೇವರ ಪ್ರತಿರೂಪ ಆಗಿದ್ದಾನೆ...**

**ಇಬ್ರಿಯರಿಗೆ 1:3**

**ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು.**

ಯೇಸು ಕ್ರಿಸ್ತನು ದೇವರ–ಚಿತ್ತದ, ಮನಸ್ಸಿನ, ಮತ್ತು ಭಾವನೆಗಳ ವ್ಯಕ್ತಿತ್ವದ ನಿಜವಾದ ಪ್ರತಿರೂಪವಾಗಿದ್ದಾನೆ. ಯೇಸುವು ಈ ಲೋಕದಲ್ಲಿ ಜೀವಿಸುತ್ತಿದ್ದಾಗ, ತಾನು ಮಾಡಿದಂತವುಗಳಲ್ಲಿ ಎಂದಿಗೂ ಕೆಟ್ಟದ್ದನ್ನು ಮಾಡಲಿಲ್ಲ. ರೋಗಿಗಳು ಯೇಸುವಿನ ಬಳಿಗೆ ಬಂದಾಗ ಆತನು ಮುಖತಿರುಗಿಸಿಕೊಳ್ಳಲಿಲ್ಲ, ಆದರೆ ಎಲ್ಲಾ ರೋಗಿಗಳನ್ನು ಆತನು ಗುಣಪಡಿಸಿದನು.ಆತನು ರೊಟ್ಟಿ ಮತ್ತು ಮೀನನ್ನು ಅಧಿಕಗೊಳಿಸುವುದರ ಮೂಲಕ ತನ್ನ ಜನರ ಭೌತಿಕ ಅಗತ್ಯತೆಯನ್ನು ಪೂರೈಸಿದನು. ದೇವರು ಯಾರಾಗಿದ್ದಾನೆ ಮತ್ತು ಭೂಲೋಕದಲ್ಲಿರುವ ನಮ್ಮ ಜೀವಿತಗಳ ಮೇಲೆ ಆಸಕ್ತಿಯುಳ್ಳವನಾಗಿದ್ದಾನೆಂದು ಆತನು ನಮಗೆ ತೋರಿಸಿದನು.

**ಮತ್ತಾಯ 15:22**

**ಆ ಸೀಮೆಯಿಂದ ಕಾನಾನ್ಯರವಳೊಬ್ಬಳು ಹೊರಟು ಬಂದು–ಸ್ವಾಮೀ, ದಾವೀದನ ಕುಮಾರನೇ, ನನ್ನನ್ನು ಕರುಣಿಸು. ನನ್ನ ಮಗಳಿಗೆ ದೆವ್ವದ ಕಾಟ ಬಹಳವಾಗಿದೆ ಎಂದು ಕೂಗಿಕೊಂಡಳು.**

**ಮತ್ತಾಯ 20:30**
**ಆಗ ದಾರಿಯ ಮಗ್ಗುಲಲ್ಲಿ ಕೂತಿದ್ದ ಇಬ್ಬರು ಕುರುಡರು, ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ಕೇಳಿ—ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು.**

ಕಾನಾನ್ಯದ ಸ್ತ್ರೀ ಮತ್ತು ಇಬ್ಬರು ಕುರುಡರು ತಮ್ಮ ಮೇಲೆ ಕರುಣೆ, ಅನುಕಂಪ ತೋರಬೇಕೆಂದು ಯೇಸುವನ್ನು ಬೇಡಿಕೊಂಡರು. ಆತನ ಒಳ್ಳೆಯತನದಲ್ಲಿ ಅವರ ಅವಶ್ಯಕತೆಗಳು ಪೂರೈಸಲ್ಪಟ್ಟವು ಮತ್ತು ಅವರು ಸ್ವಸ್ಥರಾದರು. ಯೇಸುವು ಕಾಣದಿರುವ ದೇವರ ಸ್ವರೂಪವಾಗಿದ್ದಾನೆ ಹಾಗೂ ದೇವರು ಯಾರಾಗಿದ್ದಾನೆಂಬುದರ ನಿಜವಾದ ಪ್ರತಿರೂಪವಾಗಿದ್ದಾನೆ. ನಾವು ಕೂಡ ದೇವರ ಒಳ್ಳೆತನದ ಮೇಲೆ ಬೇಡಿಕೆ ಇಡಬಹುದು ಪ್ರತಿದಿನವೂ ಆತನ ಒಳ್ಳೆಯತನವನ್ನು ಅನುಭವಿಸಬಹುದು.

## ಈ ವಿಷಯಗಳನ್ನು ನೀವೇ ಜ್ಞಾಪಿಸಿಕೊಳ್ಳಿರಿ

- ದೇವರ ಚಿತ್ತವೂ ಯಾವಾಗಲೂ ಆತನ ಸ್ವಭಾವ—ಆತನು ಏನಾಗಿದ್ದಾನೆ ಎಂಬುದರೊಂದಿಗೆ ಸಾಮರಸ್ಯವುಳ್ಳದ್ದಾಗಿರುತ್ತದೆ.

ಆದ್ದರಿಂದ, ಒಂದುವೇಳೆ **ಆತನು ಯಾರು** ಎಂದು ನೀವು ತಿಳಿದುಕೊಳ್ಳುವಾಗ, **ಆತನ ಚಿತ್ತ ಏನು** ಎಂಬುದನ್ನು ತಿಳಿದುಕೊಳ್ಳುವಿರಿ. ಕೆಲವೊಂದು ಜನರು ದೇವರ ಚಿತ್ತವು ಏನೋ ಭಯಾನಕ ಎಂಬುದಾಗಿ ಹೆದರುತ್ತಾರೆ. ದೇವರ ಚಿತ್ತಕ್ಕೆ ನಮ್ಮನ್ನು ನಾವು ಒಪ್ಪಿಸಿಕೊಡುವಂತದ್ದು ಉತ್ತಮ ಕಾರ್ಯವಾಗಿದೆ, ನಿಮಗೋಸ್ಕರವಾಗಿ ಇರುವ ಆತನ ಚಿತ್ತವು ಒಳ್ಳೆಯದಾಗಿದೆ. ಸಂತೋಷವಾಗಿರಿ!

- ದೇವರು ಎಲ್ಲವನ್ನು ತನ್ನ ಸ್ವಭಾವ ಮತ್ತು ಗುಣದೊಂದಿಗಿನ ಸಾಮರಸ್ಯದಲ್ಲಿ ಮಾಡುತ್ತಾನೆ.

ಆದ್ದರಿಂದ, ಒಂದುವೇಳೆ **ಆತನು ಯಾರು** ಎಂದು ನೀವು ತಿಳಿದುಕೊಳ್ಳುವಾಗ, **ಆತನು ಏನು ಮಾಡುತ್ತಾನೆ** ಎಂಬದನ್ನೂ ತಿಳಿದುಕೊಳ್ಳುವಿರಿ. ದೇವರು ಒಳ್ಳೆಯ ಕಾರ್ಯಗಳನ್ನೇ ಮಾಡುತ್ತಾನೆ ಎಂದು ನೀವು ಧೈರ್ಯದಿಂದ ಹೇಳಬಹುದು. ಖಂಡಿತವಾಗಿಯೂ, ಆತನು ನಿಮ್ಮನ್ನು ಎಚ್ಚರಿಸುತ್ತಾನೆ, ಸರಿಪಡಿಸುತ್ತಾನೆ, ಆದರೆ ಅವೆಲ್ಲವನ್ನು ನಮ್ಮ

ಒಳ್ಳೆಯದಕ್ಕಾಗಿಯೇ ಆತನು ಮಾಡುತ್ತಾನೆ.

- ದೇವರು ತನ್ನ ಸ್ವಭಾವ ಮತ್ತು ಗುಣಲಕ್ಷಣಕ್ಕೆ ವಿರೋಧವಾಗಿ ಅಥವಾ ವಿರುದ್ಧವಾಗಿ ಯಾವ ಹೇಳಿಕೆಯನ್ನು ಕೊಡುವದಿಲ್ಲ ಅಥವಾ ಕಾರ್ಯಗಳನ್ನು ಮಾಡುವುದಿಲ್ಲ.

ದೇವರು ಎಂದಿಗೂ ನಿಮ್ಮ ಕುರಿತು ಕೆಟ್ಟದಾಗಿ ಮಾತನಾಡುವುದಿಲ್ಲ ಅಥವಾ “ನೀನು ನರಕಕ್ಕೆ ಹೋಗುತ್ತೀಯ” ಎಂದು ಪ್ರವಾದನೆ ಹೇಳುವುದಿಲ್ಲ. ಆತನು ಒಳ್ಳೆಯದನ್ನೇ ಮಾತನಾಡುತ್ತಾನೆ ಮತ್ತು ಒಳ್ಳೆಯದನ್ನೇ ಮಾಡುತ್ತಾನೆ. ದೇವರು ನಿಮಗೆ ಕೆಟ್ಟದ್ದನ್ನು ಮಾಡದೇ ಇರುವಷ್ಟು ಒಳ್ಳೆಯವನು, ತಪ್ಪು ನಿರ್ಧಾರ ಮಾಡದೇ ಇರುವಷ್ಟು ಜ್ಞಾನವಂತನು, ನಿಮಗೆ ಸುಳ್ಳು ಹೇಳದೇ ಇರುವಷ್ಟು ಸತ್ಯವಂತನು, ನಿಮ್ಮನ್ನು ಕೆಳಗೆ ತಳ್ಳದೇ ಇರುವಷ್ಟು ಬಳವುಳ್ಳವನು.

## ಒಂದುವೇಳೆ ದೇವರು ಒಳ್ಳೆಯ ದೇವರಾಗಿದ್ದರೆ, ಯಾಕೆ ಈ ಲೋಕದಲ್ಲಿ ಕೆಟ್ಟ ಸಂಗತಿಗಳು ನಡೆಯುತ್ತವೆ?

ನೈಸರ್ಗಿಕ ವಿಕೋಪಗಳಾದ ಜಲಪ್ರಳಯಗಳು, ಚಂಡಮಾರುತಗಳು, ಇತರೆ ಕಾರಣಗಳಾದ ಭಯೊತ್ಪಾದಕ ಚಟುವಟಿಕೆಗಳು, ಪಟ್ಟಣದಲ್ಲಿನ ಅಪರಾಧಗಳು ಮತ್ತು ಇನ್ನಿತರ ವಿಷಯಗಳಿಂದ ಪ್ರತಿದಿನ ಸಾವಿಗೆ ಒಳಗಾಗುತ್ತಿರುವ ಜನರ ಸುದ್ದಿಗಳನ್ನು ದಿನಪತ್ರಿಕೆಗಳು ನಮಗೆ ತಿಳಿಸುತ್ತವೆ. ಹಾಗಾದರೆ, ದೇವರು ಒಳ್ಳೆಯ ದೇವರಾಗಿದ್ದರೆ, ಕೆಟ್ಟ ಸಂಗತಿಗಳು ಏಕೆ ಸಂಭವಿಸುತ್ತವೆ? ಮತ್ತು ಒಳ್ಳೆಯ ಜನರಿಗೆ ಕೆಟ್ಟ ಕಾರ್ಯಗಳು ಏಕೆ ಸಂಭವಿಸುತ್ತವೆ?

ದೇವರು ಒಳ್ಳೆಯ ದೇವರಾಗಿದ್ದಾನೆ ಆದರೆ ಈ ಭೂಮಿಯ ಮೇಲೆ ಕೆಟ್ಟ ದುರಾತ್ಮನು (ಸೈತಾನ) ಇದ್ದಾನೆ. ಕೆಟ್ಟ ದುರಾತ್ಮನೇ ಎಲ್ಲಾ ಕಡೆ ಹೋಗಿ ಪರಿಣಾಮ ಬೀರುತ್ತಾನೆ ಕೆಟ್ಟದ್ದನ್ನು ಉಂಟು ಮಾಡುತ್ತಾನೆ. ದುಃಖದ ಸಂಗತಿ ಏನೆಂದರೆ ತಿಳಿದು ಅಥವಾ ತಿಳಿಯದೇ ಜನರು ಭೂಮಿಯ ಮೇಲೆ ಕೆಟ್ಟದ್ದನ್ನು ನಡೆಸುವ ಸೈತಾನನ ಕಾರ್ಯಕರ್ತರಾಗುತ್ತಿದ್ದಾರೆ. ಸೈತಾನನು ಆದಾಮನ ಪಾಪದ ಮುಖಾಂತರವಾಗಿ ಈ ಪ್ರಪಂಚದೊಳಗೆ ಪ್ರವೇಶಿಸಿದನು. ಭೂಮಿಯನ್ನು ಸಂಪೂರ್ಣವಾಗಿ ಆದಾಮನಿಗೆ ಕೊಡಲ್ಪಟ್ಟಿತ್ತು ಆದರೆ ದೇವರಿಗೆ ಅವಿಧೇಯತೆ ತೋರಿಸುವ ಮೂಲಕ ಪ್ರಪಂಚದ ನಿಯಂತ್ರಣವನ್ನು ಆದಾಮನು

ಸೈತಾನನಿಗೆ ಒಪ್ಪಿಸಿಕೊಟ್ಟನು. ಆದಾಗ್ಯೂ ಇದು ಬರೀ ಸೀಮಿತ ಅವಧಿಗೆ, ಮಾತ್ರವೇ ಆಗಿದೆ. ಆದಕಾರಣ, ಪ್ರಸ್ತುತ ಸೈತಾನನು ಕೆರಳಿದವನಾಗಿ ಈ ಭೂಮಿಯ ಮೇಲೆ ಕಾರ್ಯಮಾಡುತ್ತಿದ್ದಾನೆ (ಪ್ರಕಟಣೆ 12:12). ಸೈತಾನನು ನಿಯಂತ್ರಣವು ಕೊನೆಗೊಳ್ಳುವ, ದುರಾತ್ಮನು ಮತ್ತು ಅವನ ದೆವ್ವಗಳನ್ನು ಭೂಮಿಯಿಂದ ಹೊರಗೆ ಹಾಕುವ "ಸಮಯ" ಇದೆ (ಮತ್ತಾಯ 8:29). ದೇವರು ಸೈತಾನನಿಗೂ ಮತ್ತು ಅವರ ದುರಾತ್ಮಗಳಿಗೂ ಏನು ಯೋಜನೆ ಮಾಡಿದ್ದಾನೆ ಎಂಬದನ್ನು ಪ್ರಕಟನೆ ಪುಸ್ತಕವು ಪ್ರಕಟಪಡಿಸುತ್ತದೆ (ಪ್ರಕಟಣೆ 20:10,14).

**ಲೂಕ 8:22-25**

**22ಒಂದಾನೊಂದು ದಿನದಲ್ಲಿ ಆತನು ತನ್ನ ಶಿಷ್ಯರ ಸಂಗಡ ಒಂದು ದೋಣಿಯನ್ನು ಹತ್ತಿ ಕೆರೆಯ ಆಚೇದಡಕ್ಕೆ ಹೋಗೋಣ ಎಂದು ಅವರಿಗೆ ಹೇಳಲು ಅವರು ದೋಣಿಯನ್ನು ನೀರಿನೊಳಗೆ ನೂಕಿ ಹೊರಟರು.**

**23ಅವರು ಹೋಗುತ್ತಿರುವಾಗ ಆತನಿಗೆ ನಿದ್ರೆ ಹತ್ತಿತು; ಅಷ್ಟರಲ್ಲಿ ಬಿರುಗಾಳಿ ಕೆರೆಯ ಮೇಲೆ ಬರಲು ದೋಣಿಯೊಳಗೆ ನೀರು ತುಂಬಿಕೊಂಡದರಿಂದ ಅವರು ಅಪಾಯಕ್ಕೆ ಗುರಿಯಾದರು.**

**24ಹೀಗಿರಲಾಗಿ ಅವರು ಆತನ ಹತ್ತಿರ ಬಂದು—ಗುರುವೇ, ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು. ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು.**

**25ತರುವಾಯ ಆತನು—ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು. ಅವರಾದರೋ ಭಯಪಟ್ಟು—ಈತನು ಯಾರಿರಬಹುದು? ಗಾಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ; ಅವು ಕೂಡ ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು ಅತ್ಯಾಶ್ಚರ್ಯಪಟ್ಟರು.**

ಯೇಸು ಕ್ರಿಸ್ತನು ಮತ್ತು ಆತನ ಶಿಷ್ಯರು ಬಿರುಗಾಳಿಯ ಮಧ್ಯದಲ್ಲಿದ್ದರು (ಲೂಕ 8:22–25). ಸ್ವಾಭಾವಿಕವಾಗಿ ಮಾಡಬೇಕಾದದ್ದನ್ನು ಶಿಷ್ಯರು ಮಾಡಿದರು. ಯಾವಾಗ ಪರಿಸ್ಥಿತಿ ಕೈಜಾರಿತೋ ಮತ್ತು ನಾವು ಜಲಸಮಾಧಿಯಾಗುತ್ತೇವೆ ಎಂಬ ಯೋಚನೆ ಅವರಲ್ಲಿ ಬಂದಿತೋ ಆಗ, ಅವರು ಯೇಸುವನ್ನು ಎಬ್ಬಿಸಿದರು. ಅವರು ಬಿರುಗಾಳಿಯಲ್ಲಿ ಸಿಕ್ಕಿಕೊಂಡು ಸಾಯಬೇಕು ಎಂಬುದು ತಂದೆಯ ಚಿತ್ತವಾಗಿದೆ ಎಂಬುದಾಗಿ ಗ್ರಹಿಸಿಕೊಂಡು ಅಂತಿಮ ಪ್ರಾರ್ಥನೆ ಮಾಡಲು ಯೇಸು ಕ್ರಿಸ್ತನು ಎದ್ದು ನಿಲ್ಲಲಿಲ್ಲ! ಬದಲಾಗಿ, ದೋಣಿಯ ಮುಂದೆ ಬಂದು ಧೈರ್ಯವಾಗಿ ಬಿರುಗಾಳಿಯನ್ನು ಮತ್ತು ಉಬ್ಬುವ ನೀರನ್ನು ಗದರಿಸಿದನು, ಆಗ ಎಲ್ಲವೂ ಶಾಂತವಾಯಿತು ನಾವು ಒಂದು ಪ್ರಶ್ನೆ ಕೇಳಬೇಕು—ಬಿರುಗಾಳಿಯನ್ನು ಬರಮಾಡಿದವರಾರು? ದೇವರಾ, ಸೈತಾನನಾ ಅಥವಾ ಅದು ಪ್ರಕೃತಿಯ ಕೆಲಸವೇ?

ಇದು ದೇವರಿಂದ ಬಂದಿದ್ದಲ್ಲ ಯಾಕೆಂದರೆ ಯೇಸುವು ತಂದೆಯ ಚಿತ್ತದ ವಿರುದ್ಧವಾಗಿ ಹೋರಾಟ ಮಾಡಬೇಕಾಗಿರುತ್ತಿತ್ತು. ಆದ್ದರಿಂದ, ಇದು ಸೈತಾನನ ಕಾರ್ಯವಾಗಿರಬಹುದು ಅಥವಾ ಪ್ರಕೃತಿಯು ಬಿರುಗಾಳಿಯನ್ನುಂಟುಮಾಡಿರಬಹುದು. ದೇವರು ಚಲನೆಯಲ್ಲಿ ಕೆಲವು ನಿರ್ದಿಷ್ಟ ನಿಯಮಗಳನ್ನು ಇಟ್ಟಿದ್ದಾನೆ. ಸೇಬನ್ನು ಗಾಳಿಗೆ ಮೇಲೆ ಎಸೆದರೆ ಅದು ಕೆಳಗೆ ಬರುತ್ತದೆ ಇದರರ್ಥ ದೇವರು ಕೆಳಗಡೆ ತಳ್ಳುತ್ತಾನೆ ಎಂಬುದಾಗಿ ಅಲ್ಲ ಬದಲಾಗಿ ಗುರುತ್ವಾಕರ್ಷಣೆಯಿಂದಾಗಿ ಅದು ಕೆಳಗೆ ಬೀಳುತ್ತದೆ. ದೇವರು ಪ್ರಕೃತಿಯ ನಿಯಮಗಳನ್ನು ಕೆಲಸದಲ್ಲಿ ಇಟ್ಟಿದ್ದಾನೆ. ಆದರೆ ಸ್ವಾಭಾವಿಕ ಅಂಶಗಳಲ್ಲಿ  ಸೈತಾನನು ಕೆಲಸಮಾಡುತ್ತಾನೆ. ಯೋಬನ ಪುಸ್ತಕದ ಅಧ್ಯಾಯ 1 ಮತ್ತು 2 ರಲ್ಲಿ ನಾವು ಓದುವದೇನೆಂದರೆ ಸೈತಾನನು ಕರ್ತನ ಪ್ರಸನ್ನತೆಯಿಂದ ಹೊರಟು ಯೋಬನ ಕುಟುಂಬವನ್ನು ಮತ್ತು ಅವನಿಗೆ ಸಂಬಂಧಿಸಿದಂತವುಗಳನ್ನು ನಾಶಮಾಡಲು ಕೆಲವು ನಿರ್ದಿಷ್ಟ ಅನಾಹುತಗಳನ್ನು ಉಂಟುಮಾಡಿದನು. ಇಂತಹ ಅನಾಹುತಗಳಿಗಾಗಿ ದೇವರನ್ನು ದೂಷಿಸಬೇಡಿ ಯಾಕೆಂದರೆ ದೇವರು ಎಲ್ಲಾ ಸಮಯದಲ್ಲಿ ಒಳ್ಳೆಯವನಾಗಿದ್ದಾನೆ. ಇಂತಹ ಅನಾಹುತಗಳಿಗೆ ಸೈತಾನನು ಅಥವಾ ಪ್ರಕೃತಿಯ ನಿಯಮಗಳು ಕಾರಣವಾಗಿವೆ.

ದೇವರು ಒಂದು ದಿನ ಒಳ್ಳೆಯವನು ಮತ್ತು ಇನ್ನೊಂದು ದಿನ ಕೆಟ್ಟವನಲ್ಲ. ಎಲ್ಲಾ ಸಮಯದಲ್ಲೂ ದೇವರು ಒಳ್ಳೆಯವನಾಗಿದ್ದಾನೆ!

ಯೇಸುವು ಬಿರುಗಾಳಿಯನ್ನು ಗದರಿಸಿದಾಗ, ತನ್ನ ಶಿಷ್ಯರ ಕಡೆಗೆ ತಿರುಗಿಕೊಂಡು ನೀವು ಯಾಕೆ ಈ ದಿನ ಸಭೆಗೆ ಹೋಗಲಿಲ್ಲ ಎಂದು ಕೇಳಲಿಲ್ಲ. ಯೇಸುವು ಕೇಳಿದ್ದೇನೆಂದರೆ "ನಿಮ್ಮ ನಂಬಿಕೆ ಎಲ್ಲಿ?" ಅಬ್ಬರಿಸುವ ಬಿರುಗಾಳಿಯಲ್ಲೂ, ಅವರು ಎದ್ದುನಿಂತು ನಂಬಿಕೆಯಿಂದ ಬಿರುಗಾಳಿಯ ಮೇಲೆ ಅಧಿಕಾರ ನಡೆಸಿ ಅದನ್ನು ಶಾಂತವಾಗಿಸಬಹುದಾಗಿತ್ತು ಎಂದು ಆತನಿಗೆಗೊತ್ತಿತ್ತು. ಅದೇ ರೀತಿಯಾಗಿ ನಮ್ಮಲ್ಲಿ ಸಹ ಕೆಲವರು ಅವರ ಜೀವಿತದಲ್ಲಿ ಇಂತಹ ಬಿರುಗಾಳಿಯನ್ನು ಹಾದುಹೋಗುತ್ತಿರಬಹುದು, ದೇವರನ್ನು ದೂಷಿಸುತ್ತಿರಬಹುದು. ನೀವು ದೇವರನ್ನು ದೂಷಿಸುವುದು ನಿಲ್ಲಿಸಿ! ಒಳ್ಳೆಯ ದೇವರಲ್ಲಿ ಇಟ್ಟಿರುವ ನಂಬಿಕೆಯಿಂದ ಅವುಗಳ ಮೇಲೆ ಅಧಿಕಾರವುಳ್ಳವರಾಗಿ ಎದ್ದುನಿಂತು ನಾವು ಎಲ್ಲವನ್ನು ಕೆಳಹಾಕುತ್ತೇವೆ ಎಂದು ಹೇಳಿರಿ. ನಮ್ಮ ಜೀವಿತದಲ್ಲಿ ನಮ್ಮನ್ನು ಮುಳುಗುವಂತೆ ಮಾಡುವ

ಬಿರುಗಾಳಿಗೆ ದೇವರು ಕಾರಣನಲ್ಲ. ನಿಗಧಿತ ಸಮಯದವರೆಗೆ ಭೂಮಿಯ ಮೇಲೆ ಕಾರ್ಯ ಮಾಡಲು ದೇವರು ಸೈತಾನನಿಗೆ ಅವಕಾಶ ಕೊಟ್ಟನು, ಆದರೆ ದೇವರು ದಿಕ್ಕಿಲ್ಲದವರಾಗಿ ನಮ್ಮನ್ನು ತೊರೆದುಬಿಟ್ಟಿಲ್ಲ. ಆತನು ನಮಗೆ ರಕ್ಷಾಕವಚವಾಗಿ ಧರಿಸಿಕೊಳ್ಳಲು ನಂಬಿಕೆಯನ್ನು ಮತ್ತು ತನ್ನ ವಾಕ್ಯವನ್ನು ಕೊಟ್ಟಿದ್ದಾನೆ ಅದರ ಮೂಲಕ ನಾವು ಜಯಗಳಿಸುವ ಜಯಶೀಲವಾದ ಕ್ರೈಸ್ತ ಜೀವಿತವನ್ನು ಜೀವಿಸಬಹುದು.

ದೇವರು ನ್ಯಾಯವುಳ್ಳ ದೇವರಾಗಿರುವುದರಿಂದ, ನ್ಯಾಯ ಮತ್ತು ನ್ಯಾಯಾತೀರ್ಪು ಎಂಬ ಪರಿಕಲ್ಪನೆ ಇದೆ. ಆದರೆ ನಾವು ದೇವರ ಕಾನೂನನ್ನು ಉಲ್ಲಂಘಿಸಿ ಆತನ ಗಡಿಯನ್ನು ಮೀರುವಾಗ ಇಂಥ ಸಮಯಗಳನ್ನು ಎದುರಿಸಬೇಕಾಗುತ್ತದೆ.

ದೇವರ ಅಪೇಕ್ಷೆ ಏನೆಂದರೆ ಆತನು ಏನಾಗಿದ್ದಾನೋ ಅದರ ನಿಮಿತ್ತ ಆತನನ್ನು **ಆರಾಧಿಸಬೇಕು** ಎಂಬುದಾಗಿದೆ (**ಆತನು** ಏನಾಗಿದ್ದಾನೋ ಅದರ ನಿಮಿತ್ತ ಆತನಿಗೆ ಕೃತಜ್ಞತೆ ಸಲ್ಲಿಸಿರಿ ಮತ್ತು ಆರಾಧಿಸಿರಿ), ಈ ಮೂಲಕವಾಗಿ ಆತನು ಯಾರು ಎಂಬ ದೃಡೀಕರಣದಲ್ಲಿ ನಾವು **ಜೀವಿಸುತ್ತೇವೆ** (**ಆತನು** ಪರಿಶುದ್ಧನು, ಆದ್ದರಿಂದ ನಾವು ಸಹ ಪರಿಶುದ್ದರಾಗಿರಬೇಕು; **ಆತನು** ಒಳ್ಳೆಯವನು, ಆದ್ದರಿಂದ ನಾವು ಒಬ್ಬರಿಗೊಬ್ಬರು ಒಳ್ಳೆಯವರಾಗಿರಬೇಕು; ಒಳ್ಳೆಯ ದೇವರ ಅನುಗುಣವಾಗಿ ನಮ್ಮ ಜೀವನ ಶೈಲಿ, ನಡವಳಿಕೆ ಇರಬೇಕು) ಮತ್ತು ಆತನು ಏನಾಗಿದ್ದಾನೆಂಬ ಪೂರ್ಣತೆಯನ್ನು **ಅನುಭವಿಸುತ್ತೇವೆ** (ಆತನ ಪೂರ್ಣತೆಯನ್ನು ನಾವು ಸ್ವೀಕರಿಸಬೇಕೆಂದು ಆತನು ಬಯಸುತ್ತಾನೆ). *"ಮತ್ತು ಆತನ ಪರಿಪೂರ್ಣತೆಯಿಂದ ಕೃಪೆಯ ಮೇಲೆ ಕೃಪೆಯನ್ನು ಹೊಂದಿದೆವು"* (ಯೋಹಾನ 1:16).

ದೇವರ ಒಳ್ಳೆಯತನವನ್ನು ನಮ್ಮ ಜೀವಿತದಲ್ಲಿ ನಾವು ಅನುಭವಿಸಬಹುದು. *"ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು.ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು;"* (ಕೀರ್ತನೆಗಳು 23:6).

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು 2000 ವರ್ಶಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು. ಆತನು ಪಾಪರಹಿತ ಜೀವಿತ ನಡೆಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ. ಯೇಸು ಭೂಲೋಕದಲ್ಲಿ ಅನೇಕ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕೇಳುವಂತೆ ಮಾಡಿದನು. ಹಸಿದ 5000 ಜನರಿಗೆ ಐದು ರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು, ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಕಾರ್ಯಗಳು ದೇವರು ಒಳ್ಳೆಯ ದೇವರಾಗಿದ್ದಾನೆ, ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಆತನು ಬಯಸುತ್ತಾನೆ. ಆತನು ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತಾನೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಸರಿ ಕಾಣದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಸುತ್ತದೆ ಅಥವಾ ದೂರ ಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ***"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯ ಜೀವ"*** **ಎಂದು ಹೇಳುತ್ತದೆ (ರೋಮಾಪುರದವರಿಗೆ 6:23).** ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆ ಮಾಡಿದ್ದಾನೆ. ಮೂರನೇ ದಿನದಲ್ಲಿ ಜೀವದಿಂದ ಎದ್ದು

ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ ಮತ್ತು ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ. ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ಜನರನ್ನು ಪಾಪದಿಂದ ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ—ನೀನು ಯೇಸು ಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

***"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು ..."*** **(ಅಪೋಸ್ತಲರ ಕೃತ್ಯಗಳು 10:43).**

***"ನೀನು ಯೇಸುವನ್ನೇ ಕರ್ತನೆಂದು ಬಾಯಿಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದು"*** **(ರೋಮಾಪುರದವರಿಗೆ 10:9).**

ನೀವು ಸಹ ಯೇಸು ಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪಾಪ ಪರಿಹಾರಗಳನ್ನು ಹೊಂದಿಕೊಳ್ಳಬಹುದು.

ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧಿಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರೀಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದನ್ನು ಅರ್ಥಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರು ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮೆಯನ್ನು ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ*

*ನೀನು ಮಾಡಿದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನ್ನು ರಕ್ಷಿಸಿಕೊಳ್ಳಲು ಆಗುವದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ, ನನ್ನ ಬಾಯಿಯಿಂದ ನೀನು ನನಗಾಗಿ ಮರಣವನ್ನು ಹೊಂದಿದೆ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ, ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧಿಕರಣ ಪಡೆದುಕೊಂಡೆ ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು, ನಿನ್ನನ್ನು ಪ್ರೀತಿಸಲು ಸಹಾಯ ಮಾಡು, ನಿನ್ನನ್ನು ಇನ್ನೂ ತಿಳಿಯಲೂ ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯ ಮಾಡು.*

*ಆಮೇನ್.*

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರಕ್ಕೆ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ಆಲ್ ಪೀಪಲ್ಸ್ ಸಭೆಯು **ಯೇಸು ಕ್ರಿಸ್ತನನ್ನು ಪ್ರೀತಿಸುವ, ವಾಕ್ಯದ ಮೇಲೆ ಕೇಂದ್ರಿಕರಿಸಲ್ಪಟ್ಟ, ಆತ್ಮನಿಂದ ತುಂಬಿಸಲ್ಪಟ್ಟ,** ಒಂದು ಸಜ್ಜುಗೊಳಿಸುವ ಕೇಂದ್ರ, ಸೇವಾ ತಳಹದಿಯ ಮತ್ತು ದೇಶಗಳನ್ನು ಸಂಧಿಸುವ ಒಂದು ಕುಟುಂಬ ಸಭೆಯಾಗಿದೆ.

- ಒಂದು **ಕುಟುಂಬ ಸಭೆಯಾಗಿ,** ನಾವು ಕ್ರಿಸ್ತನ ಕೇಂದ್ರಿತ ಸಹಭಾಗಿತ್ವ, ದೇವರ ಸಭೆಯಂತೆ ನಾವು ಒಬ್ಬರಿಗೊಬ್ಬರು ಪ್ರೀತಿಯಲ್ಲಿ ಪರಸ್ಪರ ಕಾಳಜಿ ಮತ್ತು ಸೇವೆ ಮಾಡುವಂತಹ ಒಂದು ಸಮುದಾಯವಾಗಿ ಒಟ್ಟಿಗೆ ಬೆಳೆಯುತ್ತೇವೆ.
- ಒಂದು **ಸಜ್ಜುಗೊಳಿಸುವ ಕೇಂದ್ರವಾಗಿ,** ನಾವು ಪ್ರತಿ ವಿಶ್ವಾಸಿಯು ವಿಜಯಶಾಲಿಯಾಗಿ ಜೀವಿಸಲು, ಕ್ರಿಸ್ತನಂತೆ ಪ್ರಬುದ್ಧರಾಗಿ ಮತ್ತು ಅವರ ಜೀವಿತಗಳಿಗಾಗಿ ದೇವರ ಉದ್ದೇಶಗಳನ್ನು ನೆರವೇರಿಸಲು ಸಜ್ಜುಗೊಳಿಸುತ್ತೇವೆ ಮತ್ತು ಅಧಿಕಾರ ನೀಡುತ್ತೇವೆ.
- ಒಂದು **ಸೇವಾ ನೆಲೆಯಾಗಿ,** ದೇವರ ವಾಕ್ಯದ ಮೂಲಕವಾಗಿ ಯೇಸು ಕ್ರಿಸ್ತನ ಸಂಪೂರ್ಣ ಸುವಾರ್ತೆಯೊಂದಿಗೆ ಮತ್ತು ಪವಿತ್ರಾತ್ಮದ ಬಲದ ಅಪ್ರಾಕೃತ ತೋರ್ಪಡಿಸುವಿಕೆಗಳೊಡನೆ ನಮ್ಮ ನಗರ, ದೇಶ ಮತ್ತು ದೇಶಗಳನ್ನು ಆಶೀರ್ವದಿಸಲು ಅರ್ಥಪೂರ್ಣ ಸೇವೆಯಲ್ಲಿ ನಾವು ತೊಡಗುತ್ತೇವೆ.
- ಒಂದು **ಪ್ರಪಂಚವನ್ನು ಸಂಧಿಸುವವರಾಗಿ,** ದೇವರ ರಾಜ್ಯಕ್ಕಾಗಿ ತಮ್ಮ ಪ್ರದೇಶಗಳ ಮೇಲೆ ಪ್ರಭಾವ ಬೀರುವ ದೈವಿಕ ನಾಯಕರು ಮತ್ತು ಆತ್ಮಭರಿತ ಸಭೆಗಳನ್ನು ಪೋಷಿಸುವದರಿಂದ ಸ್ಥಳಿಯವಾಗಿ ಮತ್ತು ಜಾಗತಿಕವಾಗಿ ನಾವು ಸೇವೆ ಸಲ್ಲಿಸುತ್ತೇವೆ.

ಆಲ್ ಪೀಪಲ್ಸ್ ಸಭೆಯಲ್ಲಿ ನಾವು, ಆತನ ಪವಿತ್ರಾತ್ಮನ ಪ್ರಮಾಣೀಕರಣ ಮತ್ತು ರಾಜಿ ಹೊಂದದ, ಅಭಿಷೇಕ ಹೊಂದಿದ, ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜ್ಞನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನ ಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ (1 ಕೊರಿಂಥದವರಿಗೆ 2:4,5; ಇಬ್ರಿಯರಿಗೆ 2:3,4). ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆಯು ನಮ್ಮ ಗುರಿಯಾಗಿದೆ.

ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಮುಖ್ಯ ನೆಲೆಯೊಡನೆ ಭಾರತದಲ್ಲಿ ಅನೇಕ ಇತರ ಸಭೆಗಳನ್ನು ಹೊಂದಿದೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. **apcwo.org/locations** ಅಥವಾ **contact@apcwo.org** ಗೆ ಇ-ಮೇಲ್ ಕಳುಹಿಸಿರಿ.

# ಉಚಿತ ಪ್ರಕಾಶನಗಳು

A Church in Revival
A Real Place Called Heaven
A Time for Every Purpose
Ancient Landmarks
Baptism in the Holy Spirit
Being Spiritually Minded and Earthly Wise
Biblical Attitude Towards Work
Breaking Personal and Generational Bondages
Change
Code of Honor
Divine Favor
Divine Order in the Citywide Church
Don't Compromise Your Calling
Don't Lose Hope
Equipping the Saints
Foundations (Track 1)
Fulfilling God's Purpose for Your Life
Gifts of the Holy Spirit
Giving Birth to the Purposes of God
God Is a Good God
God's Word–The Miracle Seed
How to Help Your Pastor
Integrity
Interpreting Scripture
Kingdom Builders
Laying the Axe to the Root
Living Life Without Strife
Marriage and Family
Ministering Healing and Deliverance
Offenses–Don't Take Them
Open Heavens
Our Redemption
Receiving God's Guidance
Revivals, Visitations and Moves of God
Shhh! No Gossip!
Speak Your Faith
The Conquest of the Mind
The Father's Love
The House of God
The Kingdom of God
The Mighty Name of Jesus
The Night Seasons of Life
The Power of Commitment
The Presence of God
The Redemptive Heart of God
The Refiner's Fire
The Spirit of Wisdom, Revelation and Power
The Wonderful Benefits of Praying in Tongues
Timeless Principles for the Workplace
Understanding the Prophetic
Water Baptism
We Are Different
Who We Are in Christ
Women in the Workplace
Work–Its Original Design

ಹೊಸ ಪುಸ್ತಕಗಳು ನಿಯಮಿತವಾಗಿ ಬಿಡುಗಡೆಗೊಳ್ಳುತ್ತವೆ. ಆಲ್ ಪೀಪಲ್ಸ್ ಸಭೆಯ ಕ್ರಿಸ್ತೀಯ ಉಚಿತ ಪುಸ್ತಕಗಳನ್ನು PDF ನಲ್ಲಿ, ಆಡಿಯೋ ಮತ್ತು ಇತರ ಸ್ವರೂಪಗಳಲ್ಲಿ ಡೌನ್ಲೋಡ್ ಮಾಡಲು ದಯವಿಟ್ಟು **apcwo.org/books** ನಿಂದ ಸಂಗ್ರಹಿಸಿರಿ. ಇವುಗಳಲ್ಲಿ ಅನೇಕ ಪುಸ್ತಕಗಳು ಇತರ ಭಾಷೆಗಳಲ್ಲೂ ಸಹ ದೊರೆಯುತ್ತವೆ. ಉಚಿತ ಆಡಿಯೋ ಮತ್ತು ವಿಡಿಯೋ ಸಂದೇಶಗಳು, ಪ್ರಸಂಗ ಟಿಪ್ಪಣಿಗಳು ಮತ್ತು ಇತರ ಉಚಿತ ಅಧ್ಯಯನ ಸಂಗ್ರಹಗಳಿಗಾಗಿ ದಯವಿಟ್ಟು **apcwo.org/sermons** ನ್ನು ಸಂಪರ್ಕಿಸಿರಿ.

# ಕ್ರಿಸಾಲಿಸ್ ಕೌನ್ಸೆಲಿಂಗ್

ಕ್ರಿಸಾಲಿಸ್ ಕೌನ್ಸೆಲಿಂಗ್ ಜನರು ಜೀವನದ ಸವಾಲುಗಳನ್ನು ಎದುರಿಸಲು ಮತ್ತು ಜಯಿಸಿ ಹೊರಬರಲು ಸಹಾಯ ಮಾಡಲು ವೈಯಕ್ತಿಕ ಸಲಹೆಯನ್ನು ನೀಡುತ್ತದೆ. ಕ್ರಿಸಾಲಿಸ್ ಕೌನ್ಸೆಲಿಂಗ, ತರಬೇತಿ ಪಡೆದ ವೃತ್ತಿಪರ ಮತ್ತು ಅನುಭವಿ ಕ್ರೈಸ್ತೀಯ ಸಲಹೆಗಾರರ ತಂಡವಾಗಿದೆ.

ನಮ್ಮ ಸೇವೆಗಳು ಎಲ್ಲಾ ವಯೋಮಾನದವರಿಗೆ ಮತ್ತು ವಿಶಾಲ ವ್ಯಾಪ್ತಿಯ ಜೀವನದ ಸವಾಲುಗಳ ಕುರಿತು ಸಂಬೋಧಿಸುವದಾಗಿದೆ.

- **ಹದಿಹರೆಯದವರು**
- **ವಯಕ್ತಿಕ ಹೊಂದಾಣಿಕೆಗಳು**
- **ಸಂಭಂದಿತ ಸವಾಲುಗಳು**
- **ಶೈಕ್ಷಣಿಕ ಕಡಿಮೆ ಸಾಧನೆ**
- **ಕೆಲಸಕ್ಕೆ ಸಂಭಂದಿಸಿದ ಸವಾಲುಗಳು**
- **ಕುಟುಂಬ / ದಂಪತಿಗಳು: ವಿವಾಹಪೂರ್ವ, ವೈವಾಹಿಕ**
- **ಪೋಷಕರು / ಮಕ್ಕಳು / ಒಡಹುಟ್ಟಿದವರು / ಗೆಳೆಯರು**
- **ವರ್ತನೆಯ ಅಸ್ತವ್ಯಸ್ತತೆಗಳು**
- **ವ್ಯಕ್ತಿತ್ವ ಅಸ್ತವ್ಯಸ್ತತೆಗಳು**
- **ಮಾನಸಿಕ / ಭಾವನಾತ್ಮಕ ಸಮಸ್ಯೆಗಳು**
- **ಒತ್ತಡ / ಆಘಾತ**
- **ಮಧುಪಾನ / ಮಾದಕವಸ್ತು ದುರುಪಯೋಗ**
- **ಆತ್ಮೀಕ ಸಮಸ್ಯೆಗಳು**
- **ಜೀವನ ತರಬೇತಿ**

ಕ್ರಿಸಾಲಿಸ್ ಕೌನ್ಸೆಲಿಂಗ ಸೇವೆಗಳು ಕೈಗೆಟಕುವ ಶುಲ್ಕಗಳು ಮತ್ತು ಸುಲಭವಾಗಿ ಪಡೆದುಕೊಳ್ಳಬಹುದಾಗಿದೆ.

ನಮ್ಮ ತರಬೇತಿ ಪಡೆದ ಸಲಹೆಗಾರರೊಂದಿಗೆ ನಿಮ್ಮ ನೇಮಕಾತಿಯನ್ನು ನಿಗದಿಪಡಿಸಲು:

**ವೆಬ್ಸೈಟ್: chrysalislife.org**
**ದೂರವಾಣಿ:** +91-80-25452617 ಅಥವಾ ಟೋಲ್-ಫ್ರೀ (ಭಾರತದೊಳಗೆ) 1-800-300-00998
**ಇಮೆಲ್: counselor@chrysalislife.org**

ಕ್ರಿಸಾಲಿಸ್ ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್ ರೀಚ್ ನ ಒಂದು ಸೇವೆಯಾಗಿದೆ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವದು, (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತುಗೊಳಿಸುವದು, (ಇ) ಕ್ರಿಸ್ತನ ಅಂಗವನ್ನು ಕಟ್ಟುವದನ್ನು, ಬಹಳ ಮುಖ್ಯ ಗುರಿಯಾಗಿಸಿಕೊಂಡಿರುವ, ಭಾರತ ದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾ 'ಸೇವಕರ ಸಮಾವೇಶವನ್ನು' ವರ್ಷಪೂರ್ತಿ ನಡೆಸುವದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಕಗಳನ್ನು ಉಚಿತವಾಗಿ ಹಂಚುವದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳುಹಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆಯುಳ್ಳದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು / ನಮ್ಮ ಕಛೇರಿಯ ವಿಳಾಸವಾದ "All Peoples Church" ಬೆಂಗಳೂರಿಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಯಿಸಬಹುದು.

**ಖಾತೆಯ ಹೆಸರು:** All Peoples Church

**ಖಾತೆ ಸಂಖ್ಯೆ:** 50200068829058

**IFSC ಕೋಡ್:** HDFC0004367

**ಬ್ಯಾಂಕ್:** HDFC Bank, 7M/308, 80 Ft Road, HRBR Layout, Kalyan Nagar, Bengaluru, Karnataka-560043

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು ಭಾರತ ದೇಶದಲ್ಲಿ ಬ್ಯಾಂಕ್ ಖಾತೆ ಹೊಂದಿರುವವರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು. ಹೆಚ್ಚುವರಿ ವಿವರಗಳಿಗಾಗಿ ದಯವಿಟ್ಟು ಸಂಪರ್ಕಿಸಿರಿ* **apcwo.org/give**.

ಹಾಗೆಯೇ ನಿಮಗೆ ಸಾಧ್ಯವಾಗುವಾಗಲೆಲ್ಲಾ ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ!

**ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!**


## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play




*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

# ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು

**apcbiblecollege.org**

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲು ಸಜ್ಜುಗೊಳಿಸಲಾಗುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು–ತರಬೇತಿಯನ್ನು ಪಡೆದುಕ್ಕೊಳ್ಳುವದನ್ನು ಒದಗಿಸುತ್ತವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಭಂದದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿವುದನ್ನು ನಾವು ನಂಬುತ್ತೇವೆ.

ಆಲ್ ಪೀಪಲ್ಸ್ ಚರ್ಚ್ ಬೈಬಲ್ ಕಾಲೇಜು (ಏಪಿಸಿ-ಬಿಸಿ)ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಬುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ.

- ಒಂದು ವರ್ಷದ ಸರ್ಟಿಫಿಕೇಟ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
- ಎರಡು ವರ್ಷದ ಡಿಪ್ಲಮೋ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (Dip.Th.)
- ಮೂರು ವರ್ಷದ ಬ್ಯಾಚೆಲೊರ್ಸ್ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತೀದಿನ **ಸೋಮವಾರದಿಂದ ಶುಕ್ರವಾರದವರೆಗೆ ಬೆಳ್ಳಿಗ್ಗೆ 9 ರಿಂದ ಮಧ್ಯಾಹ್ನ 12 ರವರೆಗೆ ಜರಗುತ್ತದೆ. ಭಾರತದ ಕಾಲಮಾನ (ಸಂಘಟಿತ ಸಾರ್ವಾತ್ರಿಕ ಸಮಯ+5:30).** ನಾವು ಇತರೆ ಮೂರು ಕಲಿಕಾ ಐಚ್ಛಿಕ ವಿಷಯಗಳನ್ನು ನೀಡುತ್ತೇವೆ.

- **ಆನ್–ಕ್ಯಾಂಪಸ್:** ಅಧ್ಯಯನ ಆವರಣದಲ್ಲಿ ವಯಕ್ತಿಕ ತರಗತಿಗಳಿಗೆ ಹಾಜರಾಗುವುದು.
- **ಅನ್ ಲೈನ್:** ಅನ್ ಲೈನ್ ನ ನೇರ ಉಪನ್ಯಾಸಗಳಿಗೆ ಹಾಜರಾಗುವದು.
- **ಇ–ಕಲಿಕೆ:** ಅನ್ ಲೈನ್ ಪೋರ್ಟರ್ ಆದ **apcbiblecollege.org/elearn** ನ ಮೂಲಕ ಸ್ವಯಂ ಚಾಲಿತವಾಗಿ ಕಲಿಯುವದು.

**ಅನ್ ಲೈನ್** ನಲ್ಲಿ ಅರ್ಜಿ ಸಲ್ಲಿಸಲು ಮತ್ತು ಕಾಲೇಜು ಪಠ್ಯಕ್ರಮ, ಅರ್ಹತಾ ಮಾನದಂಡ, ಬೋಧನಾ ವೆಚ್ಚಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ನಮೂನೆಯನ್ನು ಡೌನ್ಲೋಡ್ ಮಾಡಲು ದಯವಿಟ್ಟು **apcbiblecollege.org** ಯನ್ನು ಸಂಪರ್ಕಿಸಿ.

ದೇವರ ಕುರಿತಾದ ನಮ್ಮ ಚಿತ್ರಣವು ವಿವಿಧ ಮೂಲಗಳ ಮೂಲಕ "ಅಭಿವೃದ್ಧಿಗೊಂಡಿದೆ"–ಅವು ಯಾವುವೆಂದರೆ ಇತರರು ದೇವರ ಬಗ್ಗೆ ಏನು ಹೇಳಿದ್ದಾರೆ, ಅವರ ಅನುಭವಗಳು, ಅವಲೋಕನಗಳು, ಓದುವಿಕೆ, ವಿಶ್ಲೇಷಣೆ ಮತ್ತು ಮುಂತಾದವುಗಳು. ಆದರೆ ಇವೆಲ್ಲವುಗಳು ಸರಿಯಾಗಿಲ್ಲದಿರಬಹುದು!

ನಮ್ಮ ಹಿಂದಿನ ಅನುಭವಗಳ ಆಧಾರದ ಮೇರೆಗೆ ದೇವರು ಯಾರು, ಆತನು ಏನು ಮಾಡುತ್ತಾನೆ ಮತ್ತು ಆತನು ಹೇಗೆ ಕೆಲಸ ಮಾಡುತ್ತಾನೆ ಎಂಬ ವಿಷಯದಲ್ಲಿ ನಮ್ಮ ಅನೇಕ ವಕ್ರಗತಿಯ, ತಪ್ಪು ಕಲ್ಪನೆಗಳನ್ನು ಮತ್ತು ತಪ್ಪು ಅಭಿಪ್ರಾಯಗಳನ್ನು ಊಹಿಸಿಕೊಳ್ಳಲು ಬಯಸುತ್ತೇವೆ. ಕೆಲವೊಮ್ಮೆ ನಾವು ಧಾರ್ಮಿಕ ಸ್ಥಳಗಳಲ್ಲಿ ಕೇಳಿಸಿಕೊಂಡಿರುವ, ಧಾರ್ಮಿಕ ಪುಸ್ತಕಗಳಲ್ಲಿ ಓದಿರುವ ವಿಷಯಗಳು ಕೂಡ ನಮಗೆ ದೇವರನ್ನು ತಪ್ಪಾಗಿ ಪ್ರತಿನಿಧಿಸಬಹುದು ಮತ್ತು ಅದರ ಫಲಿತಾಂಶವಾಗಿ ನಾವು ದೇವರ ಕುರಿತು ತಪ್ಪಾದ ಹಾಗೂ ನಿಖರತೆಯಿಲ್ಲದ ಚಿತ್ರಣವನ್ನು ಹೊಂದಲು ಇವು ಕಾರಣವಾಗಿರಬಹುದು. ಅತ್ಯಂತ ಸಾಮಾನ್ಯವಾಗಿ ನಾವು ದೇವರು ಸ್ವಾರ್ಥಿ ಮತ್ತು ಕ್ರೂರಿಯಾಗಿರಬಹುದು ಎಂಬದಾಗಿಯೂ ಯೋಚಿಸುತ್ತೇವೆ.

ಈ ಪುಸ್ತಕವು ದೇವರ ಕುರಿತಾದ ನೂತನ ಚಿತ್ರಣವನ್ನು ಕೊಡುತ್ತದೆ, ದೇವರು ಒಳ್ಳೆಯ ದೇವರು ಎಂಬದನ್ನು ಸತ್ಯವೇದದಿಂದ ನಮಗೆ ತೋರಿಸುತ್ತದೆ.

All Peoples Church & World Outreach
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org